ECHOES INDIA

ಶ್ರೀ ರಾಮಚಂದ್ರ ಮಿಷನ್®

ಜುಲೈ 2014 ಸಂಪುಟ 7 ಸಂಚಿಕೆ 4



## ಮಣಪಾಕ್ಕಂನಿಂದ ವಾರ್ತೆ

### ಮೇ 2014

**ಭಂಡಾರದ ನಂತರ:** ಇದೀಗ ಭಂಡಾರವು ಮುಗಿದಿದ್ದು ಅಭ್ಯಾಸಿಗಳು ಆಶ್ರಮವನ್ನು ಬಿಟ್ಟು ಹೊರಡಲಾರಂಭಿಸಿರುವುದರಿಂದ ಆಶ್ರಮವು ಭಣಗುಟ್ಟುವುದೆಂದು ಗುರುಗಳು ಬೇಸರದಿಂದ ಹೇಳಿದರು. ಉತ್ಸವದ ಎಲ್ಲ ಮೂರುದಿನಗಳಲ್ಲೂ ಮುಂಜಾನೆಯ ಸತ್ಸಂಗಗಳನ್ನು ಗುರುಗಳು ನಡೆಸಿದ್ದುದರಿಂದಾಗಿ ಈ ಭಂಡಾರವು ವಿಶೇಷವೆನಿಸಿತ್ತು. ಗುರುಗಳ ಆರೋಗ್ಯವು ತಕ್ಕಮಟ್ಟಿಗೆ ಉತ್ತಮವಾಗಿದೆ ಮತ್ತು ಅವರು ಸಾಧ್ಯವಾದಾಗಲೆಲ್ಲ ಕುಟೀರದಲ್ಲಿ ವಿಚಾರಸಂಕಿರಣ ಅಥವಾ ಚರ್ಚಾಗೋಷ್ಠಿಗಳನ್ನು ನಡೆಸುತ್ತಿದ್ದಾರೆ. ಮೇ 3ರ ಶನಿವಾರ ಬೆಳಗ್ಗೆ ಗುರುಗಳು ತನ್ನ ಉಪಾಹಾರದ ನಂತರ ತುಂಬಾ ಜನರನ್ನು ಭೇಟಿಯಾದರು ಮತ್ತು ಒಂದು ಬೈಠಕ್ ಕೊಡಬಯಸಿದರು. ತಾನು ಕರೆಯಬೇಕೆಂದಿದ್ದವರ ಬಗ್ಗೆ ಅವರು ತುಂಬ ನಿಶ್ಚಿತರಾಗಿದ್ದರು ಮತ್ತು ಉಳಿದವರನ್ನು ಹೊರಗೆ ಕುಳಿತುಕೊಳ್ಳಲು ಹೇಳಿ ಸುದೀರ್ಘವಾದ ಒಂದು ಬೈಠಕ್ ಕೊಟ್ಟರು. ತರುವಾಯ, ಅವರು ತನ್ನ ಕಛೇರಿಯಲ್ಲಿ ಅಭ್ಯಾಸಿಗಳ ಗುಂಪೊಂದರ ಜೊತೆ ಮಾತನಾಡುತ್ತ ಪೂರ್ವಾಹ್ನವನ್ನು ಕಳೆದರು.

**ಹೊಸ ಗಾಲ್ಫ್‌ಗಾಡಿ:** ಗುರುಗಳಿಗಾಗಿ ವಿದ್ಯುತ್ ಚಾಲಿತ ಹಾಗೂ ಬೇರ್ಪಡಿಸಬಹುದಾದ ಕುರ್ಚಿಯುಳ್ಳ ಹೊಸ ಗಾಲ್ಫ್‌ಗಾಡಿಯೊಂದನ್ನು ತರಿಸಲಾಗಿದೆ. ಗಾಲಿಕುರ್ಚಿಯನ್ನು ಈ ಗಾಲ್ಫ್‌ಗಾಡಿಯೊಳಗೆ ಸೇರಿಸಬಹುದಾಗಿದ್ದು ಇದು ಈಗ ಗಾಲಿಕುರ್ಚಿಯನ್ನು ಗುರುಗಳ ಸಮೇತವಾಗಿ ಎತ್ತಿ ಅದರ ಸ್ಥಾನದಲ್ಲಿ ಇರಿಸಬಲ್ಲುದು. ಈ ಗಾಲ್ಫ್‌ಗಾಡಿಯಲ್ಲಿ ಗುರುಗಳು ಸುತ್ತಾಡಿ ಬಂದರು. ಇದರ ಯಾಂತ್ರಿಕ ಕೌಶಲ್ಯದಿಂದ ಗುರುಗಳು ತುಂಬ ಪ್ರಭಾವಿತರಾಗಿದ್ದಾರೆ. ಇದು ಅವರಿಗೆ, ಗಾಲ್ಫ್‌ಗಾಡಿಯೊಳಗೆ ಪ್ರವೇಶಿಸುವುದು ಮತ್ತು ಹೊರಗೆ ಬರುವುದನ್ನು ಸುಲಭವಾಗಿ ಮಾಡಿದ್ದು ಅವರು ಇನ್ನಷ್ಟು ನಿಯತವಾಗಿ ಸುತ್ತಾಟಗಳಿಗೆ ಹೋಗುವುದನ್ನು ಎದುರುನೋಡುತ್ತಿದ್ದಾರೆ.

ಭಾರ್ಗವ್ ನಗರದಲ್ಲಿರುವುದರಿಂದ, ಗುರುಗಳು ಆತನೊಂದಿಗೆ ಮತ್ತು ಕುಟುಂಬದೊಂದಿಗೆ ಸಮಯ ಕಳೆದರು. ಅವರು ವಿಶ್ರಾಂತಿಗೂ ಹೋಗದೆ ಮಾತನಾಡುತ್ತಿದ್ದರು ಮತ್ತು ಸಾಯಂಕಾಲ 5.30ಕ್ಕೆ ತನ್ನ ಹೊಸ ಗಾಲ್ಫ್‌ಗಾಡಿಯಲ್ಲಿ ಭಾರ್ಗವ್‌ನ ಸಾರಥ್ಯದಲ್ಲಿ ಒಂದು ಸುತ್ತಾಟಕ್ಕೆ ಹೋದರು.

ಗುರುಗಳು ಕೆಲವುದಿನಗಳಿಂದ ತನ್ನ ನಿತ್ಯಕ್ರಮಕ್ಕೆ ಮರಳಿದ್ದು, ಮುಂಜಾನೆ 5 ಗಂಟೆಗೆ ತನ್ನ ಧ್ಯಾನಕ್ಕಾಗಿ ಏಳುತ್ತಿದ್ದಾರೆ, ವಾರ್ತೆಗಳನ್ನು ಓದಿಸಿದ ಮೇಲೆ ಉಪಾಹಾರವನ್ನು ಸೇವಿಸಿ, ಇಮೇಲ್‌ಗಳನ್ನು ನೋಡುತ್ತಾರೆ. ಭಾರತದಲ್ಲಿ ನಡೆಯುತ್ತಿರುವ ಚುನಾವಣಾ ಪ್ರಕ್ರಿಯೆಗಳ ವಾರ್ತೆಗಳನ್ನು ಉತ್ಸುಕತೆಯಿಂದ ತಪ್ಪದೆ ಕೇಳುತ್ತಿದ್ದಾರೆ. ಅವರು ವಾರ್ತೆಗಳನ್ನು ವೀಕ್ಷಿಸುವಾಗ ಸಂಪೂರ್ಣ ಮೌನದಲ್ಲಿ ಇರುತ್ತಿದ್ದು, ಜರುಗುತ್ತಿರುವ ಎಲ್ಲವನ್ನೂ ಲಕ್ಷ್ಯಪೂರ್ವಕವಾಗಿ ಗಮನಿಸುತ್ತಾರೆ. ಸಮೂಹಮಾಧ್ಯಮಗಳು ಮಾಡುವ ಮತಾಭಿಪ್ರಾಯ ಸಂಗ್ರಹ ಮತ್ತು ವ್ಯಾಖ್ಯಾನಕಾರರ ಅಭಿಪ್ರಾಯಗಳನ್ನು ವೀಕ್ಷಿಸುವಲ್ಲಿ ವಿಶೇಷವಾಗಿ ಉತ್ಸುಕರಾಗಿದ್ದಾರೆ.

**ಗುರುಭಾಯಿ ಕುಟುಂಬದ ಭೇಟಿ:** ಬಾಬೂಜಿ ಮಹಾರಾಜರ ಗುರುಸೋದರರಲ್ಲೊಬ್ಬರಿಗೆ ಸಂಬಂಧಿಸಿದ ಕುಟುಂಬವೊಂದು ಗುರುಗಳನ್ನು ಭೇಟಿಯಾಗಲು ಬಂದಿತ್ತು. ಗುರುಗಳು ಸಾಕಷ್ಟು ಬಳಲಿದ್ದು, ಅದು ಅವರ ವಿಶ್ರಾಂತಿಯ ಸಮಯವಾಗಿದ್ದರೂ ಅವರು ಬಂದವರನ್ನು ಭೇಟಿಯಾಗಿ ಅವರೆಲ್ಲರಿಗೆ ಒಂದು ಬೈಠಕ್ ಕೊಟ್ಟರು.

ಗುರುಗಳು ದೂರದರ್ಶನದಲ್ಲಿ ಮಹಾದೇವ್, ಮಹಾಭಾರತ್, ಮತ್ತು ಬುದ್ಧ ಎಂಬ ಧಾರಾವಾಹಿಗಳನ್ನು ನೋಡುತ್ತಿದ್ದಾರೆ. ತಾನು ಈ ಪ್ರಸಂಗಗಳನ್ನು ನೋಡುತ್ತ ತುಂಬಾ ಕಲಿಯುತ್ತಿದ್ದೇನೆಂದು ಅವರು ಒಂದಕ್ಕಿಂತಲೂ ಹೆಚ್ಚುಬಾರಿ








ಹೇಳಿದ್ದಾರೆ. ಗುರುಗಳೊಡನೆ ಅವುಗಳನ್ನು ನೋಡುವ ಕೆಲ ಅಭ್ಯಾಸಿಗಳಿಗೆ ಹಿಂದಿ ಅರ್ಥವಾಗುವುದಿಲ್ಲವಾದ್ದರಿಂದ ಗುರುಗಳು ಕಥಾಸರಣಿ ಮುಂದುವರಿದಂತೆಲ್ಲ ಅವರಿಗಾಗಿ ಅವನ್ನು ಅನುವಾದಮಾಡಿ ಸಂಭಾಷಣೆಗಳನ್ನು ವಿವರಿಸುತ್ತಾರೆ.

ಮೇ 19ರಂದು ಗುರುಗಳು ಪೂರ್ವಾಹ್ನ ಸುಮಾರು 10.30ಕ್ಕೆ ಒಂದು ಮಾಲ್‌ಗೆ ಹೋದರು. ಅವರು ಅಲ್ಲಿ ಸಾಕಷ್ಟು ಹೊತ್ತು ಇದ್ದು ಅಪರಾಹ್ನ 2 ಗಂಟೆಗೆ ಉಪಾಹಾರಮಂದಿರ ತಲುಪಿದರು. ಅಲ್ಲಿ ಅವರು ಸುಮಾರು ಹದಿನೈದು ಅಭ್ಯಾಸಿಗಳೊಂದಿಗೆ ಊಟಮಾಡಿದರು. ಗುರುಗಳು ಅತ್ಯಲ್ಪ ಆಹಾರವನ್ನು ಸೇವಿಸಿದರೂ ಪ್ರತಿಯೊಬ್ಬರೂ ಸಾಕಷ್ಟು ಆಹಾರವನ್ನು ತರಿಸಿಕೊಂಡಿರುವುದನ್ನು ಖಚಿತಪಡಿಸಿಕೊಂಡರು. ಅವರೊಬ್ಬ ಪರಿಪೂರ್ಣ ಆತಿಥೇಯ. ದುರದೃಷ್ಟವಶಾತ್, ಈ ಪ್ರಯಾಣವು ಅವರನ್ನು ತುಂಬ ಆಯಾಸಗೊಳ್ಳುವಂತೆ ಮಾಡಿ ಅವರಿಗೆ ಮೈಕೈನೋವನ್ನು ತಂದಿತ್ತು. ಮುಂದಿನ ಎರಡು ದಿನ ಅವರಿಗೆ ಜ್ವರ ಬಂದು ವೈದ್ಯರು ಚಿಕಿತ್ಸೆ ನೀಡಿದರು. ಕೆಲದಿನಗಳೊಳಗೆ ಅವರು ಸುಧಾರಿಸಿಕೊಂಡರು.

**ಕಲಿಕೆ – ಒಂದು ನಿರಂತರ ಪ್ರಕ್ರಿಯೆ:** ಮೇ 23ರಂದು, ಗುರುಗಳು ಕೆಲ ರಶ್ಯನ್ ಅಭ್ಯಾಸಿಗಳನ್ನು ಬೈಠಕ್‌ಗೆಂದು ಕರೆದರು. ಬೈಠಕ್‌ನ ನಂತರ, ಗುರುಗಳು ತಾನು ಮತ್ತೆ ರಶ್ಯನ್ ಭಾಷೆ ಕಲಿಯಲು ತುಂಬ ಉತ್ಸುಕನಾಗಿದ್ದೇನೆಂದು ಹೇಳಿದರು. ತಾನು ಆಮೇಲೆ ಅವನ್ನು ಕೇಳಬಹುದು ಎಂಬುದರಿಂದಾಗಿ ತನಗಾಗಿ ಕೆಲವು ಪಾಠಗಳನ್ನು ಧ್ವನಿಮುದ್ರಿಸಿಕೊಡಲು ಬರಬೇಕೆಂದು ಸೋ. ಅಲೆಕ್ಸಿಯವರನ್ನು ಅವರು ಕೇಳಿದರು. ಗುರುಗಳು, "ನಾನು ಸ್ವತಃ ನನ್ನದೇ ಪಾಠಗಳನ್ನು ತಯಾರಿಸಿಕೊಂಡು ಅವನ್ನು ಧ್ವನಿಮುದ್ರಿಸಿಕೊಂಡು ಮುಂದೆ ಅವನ್ನು ಮತ್ತೆ ಕೇಳಿಸಿಕೊಂಡು ಕಲಿಯಲಿದ್ದೇನೆ" ಎಂದರು.

ಮೇ 24ರ ಶನಿವಾರ, 2014: ವಾರಾಂತ್ಯ ಕಳೆಯಲು ಪುದುಚೆರಿಯಿಂದ ಸುಮಾರು ಅರುವತ್ತು ಅಭ್ಯಾಸಿಗಳು ಮಣಪಾಕ್ಕಂಗೆ ಆಗಮಿಸಿದರು. ಗುರುಗಳು ಸಾಯಂಕಾಲ ಸುಮಾರು 6 ಗಂಟೆಗೆ ಕುಟೀರದ ಹೊರಭಾಗದಲ್ಲಿ ಕುಳಿತು ಈ ಅಭ್ಯಾಸಿಗಳೊಂದಿಗೆ ಸುಮಾರು 45 ನಿಮಿಷಗಳನ್ನು ಕಳೆದರು.

ಮೇ 25ರ ರವಿವಾರ ಸೋ. ಪ್ರಿಯಾ ಮತ್ತು ಸೋ. ಕೃಷ್ಣರ ವಿವಾಹ ವಾರ್ಷಿಕೋತ್ಸವ ದಿನವಾಗಿತ್ತು. ಗುರುಗಳು ಎದ್ದಕೂಡಲೇ ಪ್ರಸಾದವನ್ನು ಅರ್ಪಿಸಿ ಅದನ್ನು ಎಲ್ಲರಿಗೂ ನೀಡಿದರು. ಪೂರ್ವಾಹ್ನ 7.00 ಗಂಟೆಗೆ ಗುರುಗಳು ಅಲ್ಲಿ ಉಪಸ್ಥಿತರಿದ್ದ ಎಲ್ಲರಿಗೂ ಒಂದು ಬೈಠಕ್ ನೀಡಿದರು.

ಮೇ 26ರ ಸೋಮವಾರ, ಗುರುಗಳ ಏರುಪೇರಾಗುತ್ತಿರುವ ಆರೋಗ್ಯದ ಬಗ್ಗೆ ಸ್ವಲ್ಪ ಕಳವಳ ಇದ್ದ ಕಾರಣ, ಅವರು ಆರೋಗ್ಯ ತಪಾಸಣೆಗಾಗಿ MIOT ಆಸ್ಪತ್ರೆಗೆ ಹೋದರು. ಫಲಿತಾಂಶವು ತೃಪ್ತಿಕರವಾಗಿ ಬಂದಿತ್ತು. ಗುರುಗಳು, ನರೇಂದ್ರ ಮೋದಿಯವರು ಭಾರತದ ಪ್ರಧಾನಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಸಮಾರಂಭವನ್ನು ವೀಕ್ಷಿಸಿದರು.

**ಲಾಲಾಜಿ ಸ್ಮಾರಕ ಒಮೇಗಾ ಅಂತರಾಷ್ಟ್ರೀಯ ವಿದ್ಯಾಲಯ:**

CBSEಯ 10 ಮತ್ತು 12ನೇ ತರಗತಿಗಳ ಫಲಿತಾಂಶಗಳು ಬಂದಿದ್ದು ಒಮೆಗಾ ವಿದ್ಯಾಲಯ ಶೇಕಡಾ ನೂರು ಉತ್ತೀರ್ಣತೆಯನ್ನು ಸಾಧಿಸಿದೆ. 10ನೇ ತರಗತಿಯಲ್ಲಿ CBSE ಪರೀಕ್ಷೆಗೆ ಹಾಜರಾದ 142 ವಿದ್ಯಾರ್ಥಿಗಳಲ್ಲಿ ಎಲ್ಲರೂ ಉತ್ತೀರ್ಣರಾಗಿದ್ದು, ಅವರಲ್ಲಿ 9 ವಿದ್ಯಾರ್ಥಿಗಳು 10 ಅಂಕಗಳ CGPA (ಸಂಚಿತ ಶ್ರೇಣಿ) ಗಳಿಸಿದ್ದಾರೆ. ಇದರಿಂದ ಗುರುಗಳು ತುಂಬ ಸಂತುಷ್ಟರಾಗಿದ್ದು ಈ ಸುದ್ದಿಯನ್ನು ಎಲ್ಲರಿಗೂ ಹೇಳುತ್ತಿದ್ದಾರೆ.





"ಸ್ಮರಣೆಯು ಪ್ರೇಮಿಯನ್ನು ಪ್ರಿಯತಮನ ಸಮೀಪಕ್ಕೆ ತರುತ್ತದೆ. ಈ ಸಾಮೀಪ್ಯಕ್ಕೆ ಮಿತಿ ಎಂಬುದಿಲ್ಲ. ಪ್ರೇಮ ಅಥವಾ ಆಕರ್ಷಣಾಬಲ ಉನ್ನತವಾದಷ್ಟು ಓರ್ವನು ಆತನತ್ತ ಹೆಚ್ಚು ಮುಂದುವರಿಯುತ್ತಾನೆ. ಈ ಸಂಬಂಧವು ನಮಗೆ ಅನುವಂಶಿಕವಾಗಿ ಬರುತ್ತದೆ. ಈಗ ಆತನತ್ತ ಸಾಧ್ಯವಾದಷ್ಟು ಪರಮಾವಧಿ ಸಾಮೀಪ್ಯವನ್ನು ಹೊಂದಲು, ಅದನ್ನು ವರ್ಧಿಸಿಕೊಳ್ಳುವುದು ನಮಗೆ ಬಿಟ್ಟದ್ದು."

ಬಾಬೂಜಿ ಮಹಾರಾಜ್

ರಾಮಚಂದ್ರರ ಸಮಗ್ರಕೃತಿಗಳು, ಸಂಪುಟ 1, "ಎರಡನೆ ನಿಯಮ" ಅಧ್ಯಾಯದಲ್ಲಿ



## ಕೇರಳ ಪ್ರಶಿಕ್ಷಕರ ವಿಚಾರಸಂಕಿರಣ

ಮೇ 30,31 ಮತ್ತು ಜೂನ್ 1, 2014

ಈ ವಿಚಾರಸಂಕಿರಣದಲ್ಲಿ ಭಾಗವಹಿಸಲು ಕೇರಳದಿಂದ ಬಂದ ಸುಮಾರು ಅರುವತ್ತೈದು ಪ್ರಶಿಕ್ಷಕರು ಮಣಪಾಕ್ಕಂನಲ್ಲಿ ಸೇರಿದ್ದರು. ಮೊದಲನೇ ದಿನ ಈ ಸಮೂಹವನ್ನುದ್ದೇಶಿಸಿ ಸೋ. ಕಮಲೇಶ್‌ರವರು ಮಾತನಾಡಿದರು. ಪರಸ್ಪರರಿಗೆ ಬೈಠಕ್ ಕೊಡುವುದೂ ಸೇರಿದಂತೆ, ಎಲ್ಲ ದಿನಗಳಲ್ಲೂ ಪ್ರಶಿಕ್ಷಕರಿಗೆ ಕಾರ್ಯಾವಧಿಗಳನ್ನು ಆಯೋಜಿಸಲಾಗಿತ್ತು. ಈ ಕಾರ್ಯಾವಧಿಗಳು, ಗುರುಗಳ ನುಡಿಮುತ್ತುಗಳ ಮೇಲೆ ಚಿಂತನೆ, ತದನಂತರ ಸಂವಾದ ಮತ್ತು ಹಂಚಿಕೊಳ್ಳುವಿಕೆ, ಮತ್ತು ಸೋ. ರಾಜೇಶ್ ರಾಥೋಡ್ ಅವರು ನಡೆಸಿಕೊಟ್ಟ ಒಂದು ಪ್ರಶ್ನೋತ್ತರ ಅವಧಿಗಳನ್ನು ಒಳಗೊಂಡಿದ್ದವು ಮತ್ತು 'ಸೇವೆ' ಎಂಬ ವಿಷಯದ ಮೇಲೆ ಒಂದು ಕಾರ್ಯಾವಧಿಯಿತ್ತು. ಈ ಅವಧಿಯು, ಸೇವೆ ಮಾಡುವಾಗ, ಸಂಭಾಷಣೆಯ ತತ್ವಗಳು, ಆಲಿಸುವ ಕಲೆ ಮತ್ತು ತಾಳ್ಮೆ ಇವನ್ನು ಮನಸ್ಸಿನಲ್ಲಿಟ್ಟುಕೊಂಡು ತನ್ನನ್ನು ಅವಲೋಕಿಸಿಕೊಳ್ಳುವುದರ ಪ್ರಾಧಾನ್ಯತೆಯನ್ನು ಒತ್ತಿಹೇಳಿತ್ತು. ಈ ಅವಧಿಗೆ ಯೋಜಿಸಲಾದ ಚಟುವಟಿಕೆ ತಾರಸಿತೋಟಗಾರಿಕೆಯಾಗಿತ್ತು. ಗ್ರಂಥಾಲಯದ ಕಟ್ಟಡದ ಮೇಲಿನ ತಾರಸಿಯಲ್ಲಿ ಒಂದು ತರಕಾರಿತೋಟವನ್ನು ಪ್ರಾರಂಭಿಸಲು ಎಲ್ಲ ಪ್ರಶಿಕ್ಷಕರೂ ಜೊತೆಗೂಡಿ ಕೆಲಸಮಾಡಿದರು. ಮೇ 31ರಂದು ಗುರುಗಳು ಪ್ರಶಿಕ್ಷಕರೆಲ್ಲರನ್ನೂ ಭೇಟಿಯಾಗಿ ಒಂದು ಬೈಠಕ್ ನೀಡಿದರು. ಈ ಗೋಷ್ಠಿಯು ರವಿವಾರದಂದು ಎರಡು ವೀಡಿಯೋ ಪ್ರದರ್ಶನಾವದಿಗಳೊಂದಿಗೆ ಮುಕ್ತಾಯವಾಯಿತು. ಮೊದಲನೆಯದು, ಸಣ್ಣದಾದರೂ ಸುಸಂಗತ ವಿಷಯಗಳ ಮೂಲಕ ಒಂದು ಕೇಂದ್ರವನ್ನು ಕ್ರಿಯಾತ್ಮಕವಾಗಿ ಮಾಡುವುದು ಹೇಗೆ ಎಂಬ ವಿಷಯದ ಮೇಲೆ ಸೋ. ಕಮಲೇಶ್‌ರವರು ಹಾಗೂ ಎರಡನೆಯದು ಸೂಕ್ಷ್ಮಾಭಿಜ್ಞತೆಯ ಮೇಲೆ ಗುರುಗಳು ಮಾತನಾಡಿದುದೂ ಆಗಿತ್ತು.

## ಒಮೇಗಾ ಹಳೆವಿದ್ಯಾರ್ಥಿಗಳ ಮೂರನೆ ಸಭೆ

ಜೂನ್ 9–14, 2014

ಜೂನ್ 9ರಂದು ಸೋ. ಕಮಲೇಶ್‌ರವರು ನಡೆಸಿಕೊಟ್ಟ ಸತ್ಸಂಗದೊಂದಿಗೆ ವಿಚಾರಸಂಕಿರಣ ಪ್ರಾರಂಭವಾಯಿತು. ಅದಾದ ಕೂಡಲೇ ಎಳೆಯರು ವಿಚಾರಸಂಕಿರಣ ಭವನದಲ್ಲಿ ಸೇರಿದರು ಮತ್ತು ಅವರನ್ನುದ್ದೇಶಿಸಿ ಸೋ. ಕಮಲೇಶ್‌ರವರು, ಕಿರಿದಾಗಿದ್ದರೂ ಉದ್ಬೋಧಕವಾದ ಭಾಷಣವೊಂದನ್ನಿತ್ತರು. ಮುಂದಿನ ದಿನಗಳು ಭಾಷಣಗಳು ಮತ್ತು ಭೇಟಿ ನೀಡುತ್ತಿರುವ ವಿವಿಧ ಅಭ್ಯಾಸಿಗಳೊಂದಿಗೆ ಅಧಿವೇಶನಗಳು, ಹಿತಮಿತವಾದ ಸ್ವಯಂಸೇವೆ, ಮುಂಬರುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ತಾಲೀಮು, ಹಾಗೂ ಧ್ಯಾನ ಮತ್ತು ಅಭ್ಯಾಸಗಳಿಗಾಗಿ ವಿನಿಯೋಗಿಸಲ್ಪಟ್ಟಿದ್ದವು. ಕಾರ್ಯಕ್ರಮದ ಅವಧಿಗಳು ಮತ್ತು ವಿಚಾರಗೋಷ್ಠಿಗಳು ಮನರಂಜನಾತ್ಮಕ ಹಾಗೂ ಜ್ಞಾನಸಮೃದ್ಧವಾಗಿದ್ದು ಜೀವನ ಮತ್ತು ಮೌಲ್ಯಗಳ ಅನೇಕ ಅಂಶಗಳನ್ನು ಒಳಗೊಂದಿದ್ದವು. 12ರಂದು ಗುರುಕುಟೀರದಲ್ಲಿ ಅವರೆಲ್ಲರೂ ಗುರುಗಳಿಂದ ಒಂದು ಬೈಠಕ್ ಪಡೆದರು. ಗುರುಗಳು ಒಂದು ಪುಟ್ಟ ಭಾಷಣ ಮಾಡಿದರು ಮತ್ತು ಅದರಲ್ಲಿ ಅವರು ಜೂನ್ 14ನ್ನು ಒಮೆಗಾ ಹಳೆವಿದ್ಯಾರ್ಥಿಗಳ ದಿನವನ್ನಾಗಿ ಘೋಷಿಸಿದರು. 14ರಂದು ಅವರು LMOISಗೆ ಭೇಟಿಯಿತ್ತು ತಮ್ಮ ಶಿಕ್ಷಕರೊಂದಿಗೆ, ಮೇಲ್ವಿಚಾರಕರೊಂದಿಗೆ ಸಮಯವನ್ನು ಕಳೆದರು ಮತ್ತು ತಮ್ಮ ಕಿರಿಯರನ್ನು ಎತ್ತರಿಸಲು ಅವರಿಗೆ ಕಿವಿಮಾತುಗಳನ್ನು ಹೇಳಿದರು. ಆಶ್ರಮಕ್ಕೆ ಮರಳಿದಾಗ, ಅಲ್ಲಿ ಕಿರುಪ್ರವಾಸದ ಕೊನೆಯ ಹಂತವಾಗಿ ಸಾಂಸ್ಕೃತಿಕ ಕಾರ್ಯಕ್ರಮವೊಂದು ಪ್ರಾರಂಭವಾಯಿತು. ಅದನ್ನು ಎಲ್ಲರೂ ಅತ್ಯುತ್ತಮವಾಗಿ ನಿರ್ವಹಿಸಿದರು. ಮತ್ತೊಮ್ಮೆ ಅವರೆಲ್ಲರಿಗೆ ಗುರುಗಳನ್ನು ಭೇಟಿಯಾಗುವ ಮತ್ತು ಅವರೊಂದಿಗೆ ಛಾಯಾಚಿತವನ್ನು ತೆಗೆಸಿಕೊಳ್ಳುವ ಸದವಕಾಶ ದೊರಕಿತು. ಭಾಗವಹಿಸಿದವರೆಲ್ಲರಿಗೂ ಈ ಕಾರ್ಯಕ್ರಮವು ಅತ್ಯಂತ ಸಫಲ ಮತ್ತು ಅವಿಸ್ಮರಣೀಯವೆಂದು ಅನಿಸಿತು.

## ನವಪ್ರಶಿಕ್ಷಕ ಸಿದ್ಧತಾ ವಿಚಾರಸಂಕಿರಣ

ಮೇ 31ರಿಂದ ಜೂನ್ 14ರ ವರೆಗೆ, 2014

ಭಾರತದೆಲ್ಲೆಡೆಯಿಂದ ಬಂದ, ಪ್ರಶಿಕ್ಷಕರಾಗಲಿರುವ ಸುಮಾರು 27 ಅಭ್ಯರ್ಥಿಗಳು ಮಣಪಾಕ್ಕಂನಲ್ಲಿ ತಮ್ಮ ಪೂರ್ವಸಿದ್ಧತಾ ಪ್ರಕ್ರಿಯೆಯಾಗಿ ಎರಡು ವಾರಗಳ ಗಾಢವಾದ ವಿಚಾರಸಂಕಿರಣದಲ್ಲಿ ಪಾಲ್ಗೊಂಡರು. ಪೂರ್ವಸಿದ್ಧತಾ ಬೈಠಕ್‌ಗಳಲ್ಲದೆ ಅವರಿಗೆ, ಪೂರ್ವಾಹ್ನಗಳಲ್ಲಿ ಕಾರ್ಯಾಗಾರಗಳು ಮತ್ತು ಅಪರಾಹ್ನಗಳಲ್ಲಿ ಗುರುಗಳು ಮತ್ತು ಸೋ. ಕಮಲೇಶ್‌ರವರು ಪ್ರಶಿಕ್ಷಕ ಕಾರ್ಯದ ಮೇಲಿತ್ತ ಭಾಷಣಗಳ ಆಯ್ದ ವೀಡಿಯೊ ಪ್ರದರ್ಶನಗಳಿದ್ದವು. ತದನಂತರ ಅವೇ ವಿಷಯಗಳಲ್ಲಿ ಅವರನ್ನು ವಿಷಯದ ಆಳಕ್ಕೆ ಒಯ್ಯಲು ಚರ್ಚೆಗಳನ್ನು ಏರ್ಪಡಿಸಲಾಗಿತ್ತು. ಭಾಗವಹಿಸಿದವರು 'ಸತ್ಯೋದಯ' ಪುಸ್ತಕದ ಕೆಲ ಅಧ್ಯಾಯಗಳ ಮೇಲೆ ಗುಂಪುಗಳಲ್ಲಿ ಚರ್ಚಿಸಿ ಅದನ್ನು ಮಂಡಿಸಿದರು. ಎರಡು ಅವಧಿಗಳನ್ನು ಸೇವೆಗಾಗಿ ಮೀಸಲಾಗಿಡಲಾಗಿದ್ದು ಅದರಲ್ಲಿ ಅವರು ತೋಟಗಾರಿಕೆ ಮತ್ತು ನೆಲವನ್ನು ಸಮಗೊಳಿಸುವ ಕೆಲಸವನ್ನು ಕೈಗೊಂಡರು. ವಿಚಾರಸಂಕಿರಣದ ಕೊನೆಯಲ್ಲಿ, ಭಾಗವಹಿಸಿದವರಿಗೆ ಬೆಳದಿಂಗಳೂಟವೊಂದರಲ್ಲಿ ಸೋ. ಕಮಲೇಶ್‌ರವರ ಜೊತೆಯಲ್ಲಿ ಸಮಯ ಕಳೆಯುವ ಅವಕಾಶ ಲಭ್ಯವಾಗಿತ್ತು.



## ಸಹಜಮಾರ್ಗ – ನನ್ನ ಅನುಸರಣೆಯ ರೀತಿ

ಪನ್ವೇಲ್, ಮುಂಬಯಿ

ಬೆಂಗಳೂರಿನ ಕ್ರೆಸ್ಟ್‌ನ ನಿರ್ದೇಶಕರಾದ ಸೋ. ಮೋಹನ್‌ದಾಸ್ ಹೆಗಡೆಯವರು ಮೇ 25ರಂದು ತಮ್ಮ ಮುಂಬೈ ಭೇಟಿಯ ಸಮಯದಲ್ಲಿ ಸುಮಾರು ಎಂಭತ್ತು ಅಭ್ಯಾಸಗಳಿಗೆ ಪನ್ವೇಲ್ ಆಶ್ರಮದಲ್ಲಿ ಕಾರ್ಯಕ್ರಮವೊಂದನ್ನು ನಡೆಸಿದರು. ಕಾರ್ಯಕ್ರಮದ ವಿಷಯವಾಗಿದ್ದ 'ಸಹಜಮಾರ್ಗ – ನನ್ನ ಅನುಸರಣೆಯ ರೀತಿ' ಇದರ ಬಗೆಗೆ ಎಲ್ಲರೂ ಆತ್ಮಾವಲೋಕನ ಮಾಡಿಕೊಂಡರಲ್ಲದೆ, ತಮ್ಮ ಆರಂಭದ ದಿನಗಳಲ್ಲಿನ ಹಾಗು ಈಗಿನ ದಿನಗಳಲ್ಲಿನ ಸಾಧನೆಯ ರೀತಿಯ ಬಗೆಗಿನ ವಿಚಾರಗಳನ್ನು ಹಂಚಿಕೊಂಡರು.

ನಮ್ಮ ಮೊಟ್ಟಮೊದಲನೆಯ ಧ್ಯಾನವು ಗುರುಗಳಿಂದ ನಮಗೆ ದೊರೆಯುವ ಅತ್ಯಂತ ಪ್ರಬಲವಾದ ಬೈಠಕ್ ಆಗಿದ್ದು, ಆ ಸಮಯದಲ್ಲಿ ಬಿತ್ತನೆಯ ಕಾರ್ಯವು ಜರುಗಿ ಆತ್ಮವು ಜಾಗೃತಗೊಳ್ಳುತ್ತದೆ ಎಂದು ಅವರು ವಿವರಿಸಿದರು. ಗುರುಗಳ ಈ ಕೆಲಸದ ಮಹತ್ವದ ಅರಿವು ನಿಮ್ಮೆಲ್ಲರಿಗೂ ಇದೆಯೇ ಮತ್ತು ನಿಮ್ಮ ಆಧ್ಯಾತ್ಮಿಕ ಉನ್ನತಿಯಲ್ಲಿ ಪಾಲ್ಗೊಳ್ಳಲು ನೀವು ಸಿದ್ಧರಾಗಿರುವಿರೇ ಎಂದು ಅವರು ಪ್ರಶ್ನಿಸಿದರು. ಪ್ರಾರ್ಥನೆ ಮಾಡುವುದು ಮತ್ತು ಸ್ಪಷ್ಟಗುರಿಯನ್ನು ಹೊಂದಿರುವುದು – ಇವುಗಳ ಮಹತ್ವವನ್ನು ಕೂಡ ಅವರು ಒತ್ತಿ ಹೇಳಿದರು.

## ಪರಮಕುಡಿ ಕೇಂದ್ರಕ್ಕೆ ವಲಯ ವ್ಯವಸ್ಥಾಪಕರ ಭೇಟಿ



ತಮಿಳುನಾಡಿನ ವಲಯ (2ಡಿ)ಯ ವ್ಯವಸ್ಥಾಪಕರಾದ ಸೋ. ಪಿ. ರಾಮನಾಥನ್‌ರವರು ಮೇ 17ರಂದು ಪರಮಕುಡಿ ಕೇಂದ್ರಕ್ಕೆ ಭೇಟಿಯಿತ್ತರು. ಪರಮಕುಡಿ, ಮನಮಧುರೈ, ರಾಮನಾಥಪುರಂ ಮತ್ತು ಶಿವಗಂಗೆಯ ಪ್ರಶಿಕ್ಷಕರೂ ಸೇರಿದಂತೆ ಅರವತ್ನಾಲ್ಕು ಅಭ್ಯಾಸಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಬೆಳಗಿನ ಸತ್ಸಂಗದ ನಂತರ ನಡೆಸಲಾದ ಮುಕ್ತಸಭೆಯಲ್ಲಿ ಇಪ್ಪತ್ತು ಜನ ಆಹ್ವಾನಿತರು ಭಾಗವಹಿಸಿದ್ದರು. ಧ್ಯಾನದ ಉದ್ದೇಶ, ಸಹಜಮಾರ್ಗ ಪದ್ಧತಿಯ ಪ್ರಮುಖ ಲಕ್ಷಣಗಳು ಹಾಗು ಅದರ ಪ್ರಭಾವಗಳ ಬಗೆಗೆ ಪ್ರಶಿಕ್ಷಕ ಸೋದರರಾದ ರಾಮನಾಥನ್, ರಾಧಾಕೃಷ್ಣನ್, ಕುಮಾರ್ ಮತ್ತು ಭಾಸ್ಕರನ್ ಇವರುಗಳು ಭಾಗವಹಿಸಿದವರಿಗೆ ವಿವರಿಸಿದರು. ಆಹ್ವಾನಿತರಲ್ಲಿ ಹತ್ತು ಮಂದಿ ಧ್ಯಾನವನ್ನು ಪ್ರಾರಂಭಿಸಲು ತಯಾರಾದರು ಮತ್ತು ಅವರಲ್ಲಿ ಎಂಟು ಮಂದಿ ಆ ಕೂಡಲೆ ತಮ್ಮ ಪ್ರಥಮ ಬೈಠಕನ್ನು ಪಡೆದರು.

ಧ್ಯಾನದಿಂದ ತಮಗಾದ ಅನುಭವಗಳು ಹಾಗು ಲಾಭಗಳ ಬಗೆಗೆ ಅಭ್ಯಾಸಿಗಳು ಮಾತನಾಡಿದ ನಂತರ ಕಾರ್ಯಕ್ರಮವು ಸಂಜೆಯ ಸತ್ಸಂಗದೊಂದಿಗೆ ಮುಕ್ತಾಯಗೊಂಡಿತು.

## IISC ಬೆಂಗಳೂರು ಅಭ್ಯಾಸಿಗಳ ಮಣಪ್ಪಾಕ್ಕಂ ಭೇಟಿ

ಬೆಂಗಳೂರಿನ ಭಾರತೀಯ ವಿಜ್ಞಾನ ಕೇಂದ್ರ(IISC)ದ ಆವರಣದಲ್ಲಿ ಈಗ ಸುಮಾರು ಮೂವತ್ತು ಅಭ್ಯಾಸಿಗಳಿದ್ದಾರೆ. IISC ಯಲ್ಲಿ ಗೌರವಾನ್ವಿತ ಪ್ರಾಧ್ಯಾಪಕರೂ ಹಾಗು ಪ್ರಶಿಕ್ಷಕರೂ ಆಗಿರುವ ಸೋ. ಎ. ಪೆರುಮಾಳ್‌ರವರು ಜೂನ್ 7 ಮತ್ತು 8 ರಂದು ಮಣಪ್ಪಾಕ್ಕಂನ ಬಾಬೂಜಿ ಮೆಮೋರಿಯಲ್ ಆಶ್ರಮಕ್ಕೆ ಭೇಟಿಯಿತ್ತ ಈ ಅಭ್ಯಾಸಿಗಳೊಂದಿಗಿದ್ದರು. ಈ ಯುವ ಅಭ್ಯಾಸಿಗಳು, ಭೇಟಿಯ ಸಮಯದಲ್ಲಿ ಸತ್ಸಂಗಗಳಲ್ಲಿ ಭಾಗವಹಿಸಿದುದಲ್ಲದೆ ತಮ್ಮ ಸ್ವಯಂಸೇವಾಕಾರ್ಯದ ಸಮಯದಲ್ಲಿ ಉತ್ಸಾಹದಿಂದ ಮಾವಿನ ಕಾಯಿಗಳನ್ನು ಕಿತ್ತು ಸಂಗ್ರಹಿಸಿದರು. ಭೇಟಿಯ ಮೊದಲ ದಿನದಂದು ಸಂಜೆ ಗುರುಗಳೊಂದಿಗೆ ನಡೆದ ಒಂದು ಸಂಕ್ಷಿಪ್ತ ಸಭೆಯು ಇವರ ಭೇಟಿಯ ಮಹತ್ವದ ಅಂಶವಾಗಿತ್ತು. ಗುರುಗಳು ಪ್ರತಿಯೊಬ್ಬರನ್ನು ಪ್ರತ್ಯೇಕವಾಗಿ ಮಾತನಾಡಿಸಿ ಆಶೀರ್ವದಿಸಿದರು.

ಭಾನುವಾರದಂದು ಸತ್ಸಂಗದ ನಂತರ 'ಗುರುಗಳು', 'ಮಿಷನ್' ಹಾಗು 'ಪದ್ಧತಿ'ಗೆ ಸಂಬಂಧಿಸಿದಂತೆ ಅನೇಕ ಪ್ರಶ್ನೆಗಳಿಗೆ ಉತ್ತರ ನೀಡಿದ ಮಿಷನ್ನಿನ ಮೂವರು ಅನುಭವಿ ಅಭ್ಯಾಸಿ ಸೋದರರಾದ ವಿ.ಕೆ. ಸೋಮಕುಮಾರ್, ಎ.ಪಿ.ದೊರೈ ಮತ್ತು ಆಲ್ಬರ್ಟೋ ಲಫ್ರಾಂಚಿ ಇವರುಗಳೊಂದಿಗೆ ಸಮಾಲೋಚನೆ ನಡೆಸಿದರು. ಉತ್ತರಗಳ ನಡುವೆ ಅವರು ಸ್ವಾರಸ್ಯಕರ ಘಟನೆಗಳು ಹಾಗು ಸ್ವಂತ ಅನುಭವಗಳನ್ನು ಹೇಳಿದರು. ಆಧ್ಯಾತ್ಮಿಕವಾಗಿ ಉತ್ಕೃಷ್ಟಗೊಂಡಂಥ ಭಾವನೆಯೊಂದಿಗೆ ಹಾಗು ತಮ್ಮ ಅಭ್ಯಾಸವನ್ನು ಮೊದಲಿಗಿಂತಲೂ ಉತ್ತಮವಾಗಿ ಅನುಷ್ಠಾನ ಮಾಡುವ ಪ್ರೇರಣೆಯೊಂದಿಗೆ ಗುಂಪಿನ ಎಲ್ಲ ಸದಸ್ಯರೂ ಹಿಂದಿರುಗಿದರು.



## ಅಧ್ಯಾಪಕವರ್ಗದ ತರಬೇತಿ ಕಾರ್ಯಕ್ರಮ, ಖರಗಪುರ



ಫೆಬ್ರವರಿ 2014 ರಂದು ಪಾಟ್ನಾದಲ್ಲಿ ನಡೆದ ವಲಯದ ಸಭೆಯಲ್ಲಿ, ಬಿಹಾರ ಮತ್ತು ಜಾರ್ಖಂಡ್‌ನಲ್ಲಿ ನಡೆಸಲಾಗುತ್ತಿರುವ 'ಗ್ರೌಂಡಿಂಗ್ ಇನ್ ಪ್ರಾಕ್ಟೀಸ್' (GITP) ಕಾರ್ಯಕ್ರಮವನ್ನು ಪ್ರೋತ್ಸಾಹಿಸುವ ಸಲುವಾಗಿ ಬೃಹತ್ ಸಂಖ್ಯೆಯಲ್ಲಿ ಸ್ವಯಂ ಸೇವಕರ ಅಗತ್ಯವಿದೆಯೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಯಿತು. ಇದರ ಪರಿಣಾಮವಾಗಿ ಸೋ. ಮನೋಜ್ ತಿವಾರಿಯವರು (ವಲಯ 17 ಮತ್ತು 20ರ ಉಸ್ತುವಾರಿ) ಕ್ರೆಸ್ಟ್ ಖರಗಪುರದಲ್ಲಿ ಬಿಹಾರದ ಮೂವತ್ನಾಲ್ಕು, ಝಾರ್ಖಂಡ್‌ನ ಇಪ್ಪತ್ತೆರಡು, ಉತ್ತರ ಸಿಕ್ಕಿಂನ ಎರಡು, ಉತ್ತರ ಪಶ್ಚಿಮ ಬಂಗಾಳದ ಎರಡು ಹಾಗು ದಕ್ಷಿಣ ಪಶ್ಚಿಮ ಬಂಗಾಳದ ಹದಿನೆಂಟು ಪ್ರತಿನಿಧಿಗಳಿಗಾಗಿ 'ಅಧ್ಯಾಪಕವರ್ಗದ ತರಬೇತಿ ಕಾರ್ಯಕ್ರಮ' (FDP) ವನ್ನು ಆಯೋಜಿಸಿದ್ದರು.

ಸೋದರಿಯರಾದ ನಂದಿತಾ ಮಾಥುರ್, ಛವಿ ಸಿಸೊಡಿಯ ಮತ್ತು ಸೋದರರಾದ ಸಂತೋಷ್ ಶ್ರೀನಿವಾಸನ್, ಆಲ್ಬರ್ಟೋ ಲಫ್ರಾಂಚಿ ಇವರುಗಳ ಸಹಾಯದೊಂದಿಗೆ, ಹೊಸ ತರಬೇತಿದಾರರುಗಳೆಲ್ಲ ಒಟ್ಟು ಸೇರಿ ಪ್ರತಿನಿಧಿಗಳಿಗೆ ತರಬೇತಿ ನೀಡುವದಕ್ಕಷ್ಟೇ ಅಲ್ಲದೆ ತಮ್ಮ ಸ್ವಂತ ತರಬೇತಿಗಾಗಿಯೂ ಕೂಡ ಕಠಿಣ ಶ್ರಮದೊಂದಿಗೆ ಅಭ್ಯಸಿಸಿದರು.

ಸ್ವೀಕರಿಸಲಾದ ಪ್ರತಿಕ್ರಿಯೆಯ ಪ್ರಕಾರ ಕಾರ್ಯಕ್ರಮವು ಅತ್ಯಂತ ಪರಿಣಾಮಕಾರಿಯಾಗಿದ್ದು, ಬಹಳಷ್ಟು ಕಲಿಕೆಯನ್ನು ಎಲ್ಲರಿಗೂ ಒದಗಿಸಿತು. ಅದರಲ್ಲಿ ವಿಷಯಗಳು ಪ್ರಕಟಗೊಂಡ ಕ್ಷಣಗಳು, ಹಾಸ್ಯ, ಸಂತೋಷ, ತೀವ್ರತರ ಚಿಂತನೆ, ಕಠಿಣ ಪರಿಶ್ರಮ ಮತ್ತು ಎಲ್ಲಕ್ಕಿಂತಲೂ ಹೆಚ್ಚಾಗಿ ನೆರೆದವರ ನಡುವಿನ ಭಾತೃತ್ವದ ಭಾವನೆಯ ಅತ್ಯುತ್ತಮ ಪರಿಸರಗಳಿದ್ದವು. ಅವರಲ್ಲಿ ಐವತ್ತು ಮಂದಿ GITP ಕಾರ್ಯಕ್ರಮವನ್ನು ನಡೆಸಿಕೊಡಲು ಈಗ ಶಕ್ತರಿದ್ದು ಇಪ್ಪತ್ತೈದು ಮಂದಿ ಸಹಾಯಕ ಸಿಬ್ಬಂದಿಯಾಗಿ ಕೆಲಸ ಮಾಡಲು ತಯಾರಾಗಿದ್ದಾರೆ.

## ಪ್ರಶಿಕ್ಷಕರ ತರಬೇತಿ ಕಾರ್ಯಕ್ರಮ, ಜಬಲ್‌ಪುರ



ಜಬಲ್‌ಪುರದ ವಲಯದ ಆಶ್ರಮ (8ಬಿ)ನಲ್ಲಿ ಜೂನ್ 5 ರಿಂದ 8 ರವರೆಗೆ ನಾಲ್ಕು ದಿನಗಳ ಪ್ರಶಿಕ್ಷಕರ ತರಬೇತಿ ಕಾರ್ಯಕ್ರಮವೊಂದನ್ನು ಮಧ್ಯಪ್ರದೇಶ (ಪೂರ್ವ ಮತ್ತು ಪಶ್ಚಿಮ) ಹಾಗು ವಿದಿಶಾದ ಪ್ರಶಿಕ್ಷಕರಿಗಾಗಿ ನಡೆಸಲಾಯಿತು. ಸೋ. ಸಂತೋಷ್ ಶ್ರೀನಿವಾಸನ್‌ರವರು ಈ ಕಾರ್ಯಕ್ರಮವನ್ನು ನಡೆಸಿಕೊಟ್ಟರು. "ಹೃದಯವನ್ನು ಬೆಳೆಸಿಕೊಳ್ಳಲು ನಿಮ್ಮ ಹೃದಯದ ಮೇಲೆ ಕೆಲಸ ಮಾಡಿರಿ" ಇದು ಕಾರ್ಯಕ್ರಮಕ್ಕೆ ಗುರುಗಳು ಕೊಟ್ಟ ವಿಷಯ. ಯಾವುದೇ ವೇಳಾಪಟ್ಟಿಯಿಲ್ಲದೆ ಮೌನವಾಗಿ ಹೃದಯದೊಂದಿಗೆ ಸಮಯ ಕಳೆದುದು ಈ ಕಾರ್ಯಕ್ರಮದ ವಿಶೇಷತೆಯಾಗಿತ್ತು. ಭಾಗವಹಿಸಿದವರೆಲ್ಲರೂ ಕಾರ್ಯಕ್ರಮವನ್ನು ಪ್ರಶಂಶಿಸಿಸಿದರು ಮತ್ತು ಅಧ್ಯಾತ್ಮದ ಉಲ್ಲಾಸವನ್ನು ಅನುಭವಿಸಿದರು.

## ಪುನಃಶ್ಚೇತನ ಕಾರ್ಯ – ಉತ್ತರ ತಮಿಳುನಾಡು

ವಲಯ 2ಎ ಗೆ ಸೇರಿದ ಸೇಲಂ, ಕೃಷ್ಣಗಿರಿ, ವೆಲ್ಲೂರು(ವಡವಿರಿಂಚಿಪುರಂ)ನಲ್ಲಿ ಮೇ 25 ರಂದು ಹಾಗು ಹರೂರಿನಲ್ಲಿ ಜೂನ್ 1ರಂದು "ಹತ್ತು ನಿಯಮಗಳು ಚಾರಿತ್ರ್ಯ ನಿರ್ಮಾಣಕ್ಕೊಂದು ಸಾಧನ" ಎಂಬ ವಿಷಯದ ಮೇಲೆ ಆಧ್ಯಾತ್ಮಿಕ ಪುನಃಶ್ಚೇತನದ ಕಾರ್ಯಕ್ರಮವೊಂದು ಜರುಗಿತು. ಕ್ರಮವಾಗಿ ಈ ನಾಲ್ಕು ಕೇಂದ್ರಗಳಿಂದ ಸೋ. ಎಳಿಲರಸಿ ಮತ್ತು ಸಹೋದರರಾದ ರಘುಪತಿ, ಸುದರ್ಶನ್, ಮುರುಗರಸನ್ ಇವರುಗಳನ್ನು ಅಭ್ಯಾಸಿಗಳಿಗೆ ಮಾರ್ಗದರ್ಶನ ಮಾಡಲು ಮತ್ತು ತಿಳಿವಳಿಕೆ ನೀಡಲು ಆಹ್ವಾನಿಸಲಾಗಿತ್ತು. ನಿಯಮ ಒಂದು ಮತ್ತು ಮೂರನ್ನು ವಿಷಯವಾಗಿ ತೆಗೆದುಕೊಳ್ಳಲಾಗಿತ್ತು.

ಸಂವಾದಾತ್ಮಕವಾಗಿದ್ದ ಈ ಸಭೆಗಳು, ಗುರುಗಳ ಹಾಗು ಬಾಬೂಜಿಯವರ ಹೇಳಿಕೆಗಳಿಂದ ಸಮೃದ್ಧವಾಗಿದ್ದುವು ಮತ್ತು ಅವರೀರ್ವರ ನಡುವಿನ ಸಂಬಂಧದ ಕುರಿತಾದ ವಾಕ್ಯವೃಂದಗಳನ್ನು ಹೊಂದಿದ್ದುವು. ನಿಜ ಜೀವನದ ವೈಯಕ್ತಿಕ ಅನುಭವಗಳನ್ನು ಹಂಚಿಕೊಂಡ ಅವರುಗಳು ಸಾಧನೆಗೆ ಸಂಬಂಧಿಸಿದ ವಾಸ್ತವದೆಡೆಗೆ ಗಮನ ಹರಿಸಿದರು. ಸಭೆಯು ಎಲ್ಲರಿಗೂ ಹರುಷವನ್ನು ತಂದಿತು ಮತ್ತು ಅದನ್ನು ಎಲ್ಲೆಡೆಯೂ ಹರಡಲು ಅವರು ತವ್ಮೊಂದಿಗೆ ಒಯ್ದರು.



Harur



Salem



Krishnagiri

## ಧ್ಯಾನಮಂದಿರದ ಉದ್ಘಾಟನೆ – ನವಸಾರಿ, ಗುಜರಾತ್




ಗುಜರಾತಿನಲ್ಲಿರುವ ನವಸಾರಿ ಆಶ್ರಮವು ಅತ್ಯಂತ ಹಳೆಯ ಆಶ್ರಮವಾಗಿದ್ದು, ಆಶ್ರಮದ ಸುತ್ತ ವಿಶಾಲವಾದ ಭೂಮಿಯು ಲಭ್ಯವಿದೆ. ಇಲ್ಲಿನ ಅಭ್ಯಾಸಿಗಳು ಬಹುದಿನಗಳಿಂದ ಒಂದು ಧ್ಯಾನಮಂದಿರವನ್ನು ಹೊಂದುವ ಅತೀವ ಬಯಕೆಯುಳ್ಳವರಾಗಿದ್ದರು. ಇವರ ಕಠಿಣ ಶ್ರಮದ ಫಲಶ್ರುತಿಯಾಗಿ ಧ್ಯಾನಮಂದಿರವನ್ನು ತಾತ್ಕಾಲಿಕ ರೂಪದಲ್ಲಿ ಕಟ್ಟಿ ತಮ್ಮ ಕನಸನ್ನು ನನಸಾಗಿಸಿದ್ದಾರೆ. ಗುರುಗಳ ಸಮ್ಮತಿಯೊಂದಿಗೆ ವಲಯ 6ಬಿ ಯ ಮುಖ್ಯಸ್ಥರಾದ ಸೋ. ಸುರೇಂದ್ರ ಅಗರ್ವಾಲ್‌ರವರು ನವಸಾರಿ ಮತ್ತು ಹತ್ತಿರದ ಕೇಂದ್ರಗಳಾದ ಛಿಖ್ಲಿ, ಬಿಲ್ಲಿಮೋರ ಮತ್ತು ಅಮಲ್ಸಾಡ್‌ಗಳಿಂದ ಆಗಮಿಸಿದ್ದ ಸುಮಾರು 100 ಮಂದಿ ಅಭ್ಯಾಸಿಗಳಿಗೆ ಸತ್ಸಂಗ ನಡೆಸುವುದರೊಂದಿಗೆ ಆಶ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಅವರು ಒಂದು ಆಶ್ರಮವನ್ನು ಹೊಂದುವ ಬಗೆಗಿನ ಪ್ರಾಮುಖ್ಯತೆಯನ್ನು ವಿವರಿಸುತ್ತ, ನಮ್ಮ ಉಳಿದಿರುವ ಕಾಲಾವಧಿ ಸಂಕುಚಿತಗೊಳ್ಳುತ್ತಿದ್ದು, ಸದಾಕಾಲ ನಮ್ಮ ಗುರಿಯೆಡೆಗಿನ ಗಮನವನ್ನು ಕೇಂದ್ರೀಕರಿಸಿಕೊಂಡು ನಮ್ಮ ಪ್ರಭಾಕೇಂದ್ರವನ್ನು ಉತ್ಕೃಷ್ಟವಾಗಿ ಉಪಯೋಗಿಸಿಕೊಳ್ಳುವತ್ತ ಗಮನ ಹರಿಸಬೇಕೆಂದು ಒತ್ತಿ ಹೇಳಿದರು. ಈಗ ಭಾನುವಾರದ ಸತ್ಸಂಗವನ್ನು ನವಸಾರಿ ಆಶ್ರಮಕ್ಕೆ ವರ್ಗಾಯಿಸಲಾಗಿದೆ. ಈ ಸಂದರ್ಭದಲ್ಲಿ ಗುರುಗಳ ಉಪಸ್ಥಿತಿಯನ್ನು ಎಲ್ಲರು ಅನುಭವಿಸಿದರು. ನವಸಾರಿ ಕೇಂದ್ರದ ವ್ಯವಸ್ಥಾಪಕರರಾದ ಸೋ. ನಿತಿನ್ ಹರಿಯಾನಿ ನವಸಾರಿಯ ಎಲ್ಲ ಸ್ವಯಂಸೇವಕರ ಕಠಿಣ ಪರಿಶ್ರಮವನ್ನು ಶ್ಲಾಘಿಸುವುದರ ಜೊತೆಗೆ ವಲ್ಸಾಡ್ ಕೇಂದ್ರದ ಸ್ವಯಂಸೇವಕರ ಪರಿಶ್ರಮದ ಬಗ್ಗೆ ಸಹ ಪ್ರಸ್ತಾಪಿಸಿದರು.

## ವಲಯ ಸಭೆ – ಹರಿಯಾಣ

ಎ ಝೋಡ್ 21 ಹರಿಯಾಣ ವಲಯವು ಸೋನೆಪತ್ ಆಶ್ರಮದಲ್ಲಿ ಮೇ 25 ರಂದು ಆಮಂತ್ರಿತರಾಗಿ ನೆರೆದಿದ್ದ ಪ್ರಶಿಕ್ಷಕರು, ಸಂಯೋಜಕರು, ಸಹಯೋಜಕರು, ಸ್ವಯಂಸೇವಕರು ಹಾಗು ಕೇಂದ್ರಗಳ ವ್ಯವಸ್ಥಾಕರುಗಳನ್ನು ಒಳಗೊಂಡಂತೆ ಒಂದು ಸಭೆಯನ್ನು ನಡೆಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ವಲಯಾಧಿಕಾರಿಯಾದ ಡಾ. ಸತ್ಯ ಎನ್. ಮೊಂಡಲ್ ಅವರು ವಹಿಸಿದ್ದರು. ಕೇಂದ್ರ ವ್ಯವಸ್ಥಾಪಕರು ಮತ್ತು ವಲಯಾಧಿಕಾರಿಗಳು ತಮ್ಮ ತಮ್ಮ ಕಾರ್ಯಕ್ಷೇತ್ರಗಳನ್ನು ಕುರಿತಂತೆ ಅಂದರೆ, ತರಪೇತಿ ಮತ್ತು ಅಭಿವೃದ್ಧಿ, ಯು ಕನೆಕ್ಟ್, ಕ್ರೆಸ್ಟ್, ಮೌಲ್ಯಾಧಾರಿತ ಶಿಕ್ಷಣ, ಪ್ರಬಂಧ ಸ್ಪರ್ಧೆ, ಎಖೋಸ್ ವಾರ್ತಾಪತ್ರ,



ಚರಿತ್ರೆ ಮತ್ತು ಲೆಕ್ಕ ಪತ್ರಗಳಬಗ್ಗೆ ತಿಳಿವಳಿಕೆ ನೀಡಿದರು. ನಂತರ, ಹೊಸ ಕೇಂದ್ರಗಳನ್ನು ಅಭಿವೃದ್ಧಿ ಪಡಿಸುವತ್ತ ಮಾರ್ಗಗಳ ಬಗ್ಗೆ ಚರ್ಚಿಸಲಾಯಿತು ಮತ್ತು ಹೊಸ ಹಾಗು ಬಹು ದೂರದಲ್ಲಿನ ಕೇಂದ್ರಗಳ ಅಭ್ಯಾಸಿಗಳ ಫಲಪ್ರದ ಸೇವೆಗಾಗಿ ನಮ್ಮಲ್ಲಿ ಇರುವ ಸೌಕರ್ಯಗಳ ಸಂಪೂರ್ಣ ಪ್ರಯೋಜನ ಪಡೆದು ತಲಾ ಐದು ಕೇಂದ್ರಗಳನ್ನು ಒಳಗೊಂಡ ಐದು ಸಮೂಹಗಳನ್ನು ರಚಿಸುವ ತೀರ್ಮಾನವನ್ನು ಕೈಗೊಳ್ಳಲಾಯಿತು.

## ಆಶ್ರಮದ ಚಟುವಟಿಕೆಗಳ ಬಗ್ಗೆ ತರಬೇತಿ ಕಾರ್ಯಕ್ರಮ, ಷಹಜಹಾನಪುರ



ಮೌಲ್ಯಾಧಾರಿತ ಆಧ್ಯಾತ್ಮಿಕ ಶಿಕ್ಷಣ (ವಿಬಿಎಸ್‌ಇ), ಮುಕ್ತ ಸಭೆಗಳು, ಗೃಹ ಕೂಟಗಳು ಮತ್ತು ಪ್ರಬಂಧ ಸ್ಪರ್ಧೆಗಳನ್ನು ಹೇಗೆ ನಡೆಸಬೇಕು ಎಂಬುದರ ಬಗ್ಗೆ ಮೇ 9 ರಿಂದ 11 ರವರೆಗೆ ವಲಯ 12ಬಿ ಯ 11 ಮಂದಿ ಪ್ರಶಿಕ್ಷಕರು ಹಾಗು 41 ಅಭ್ಯಾಸಿಗಳಿಗೆ ಷಹಜಹಾನಪುರದ ಯೋಗಾಶ್ರಮದಲ್ಲಿ 3 ದಿನಗಳ ಸಮಾವೇಶವನ್ನು ನಡೆಸಲಾಯಿತು. ಸೋ. ಉಮಾಶಂಕರ್ ಬಾಜಪೇಯಿ (ಕಾರ್ಯದರ್ಶಿ) ಮತ್ತು ಸೋ. ಪ್ರಭಾತ್ ಕುಮಾರ್ (ವಲಯಾಧಿಕಾರಿ) ಭಾಷಣಕಾರರಾಗಿ ಭಾಗವಹಿಸಿದರು. ಭಾಗವಹಿಸಿದ್ದ ಅಭ್ಯರ್ಥಿಗಳು ನವ ಚೈತನ್ಯ ಮತ್ತು ವಿಚಾರಗಳಲ್ಲಿ ಮೀಯುತ್ತಿರುವಂತೆ ಕಂಡುಬಂದರು. ಅವರೆಲ್ಲರು ಮೌಲ್ಯಾಧಾರಿತ ಶಿಕ್ಷಣವನ್ನು ತಮ್ಮ ಕೇಂದ್ರಗಳಲ್ಲಿ ಪ್ರಚುರಗೊಳಿಸಲು ಕಂಕಣಬದ್ಧರಾದರು. ಇದಲ್ಲದೆ ಅಭ್ಯರ್ಥಿಗಳು ಪ್ರಬಂಧ ಬರೆಸುವ ಕಾರ್ಯಕ್ರಮದ ವಿನ್ಯಾಸ ಮತ್ತು ಸಂಯೋಜನೆಯು ಗುರಿಯ ಬಗ್ಗೆ ಸಹ ಚರ್ಚೆಯಲ್ಲಿ ಪಾಲ್ಗೊಂಡರು.

## ಯುವ ಕಾರ್ಯಕ್ರಮಗಳು



### ಬನಶಂಕರಿ ಆಶ್ರಮ, ಬೆಂಗಳೂರು

ಬೆಂಗಳೂರಿನ ಸುಮಾರು 35 ಯುವಜನರಿಗೆ ವಸತಿ ಸೌಲಭ್ಯಸಹಿತ ಒಂದು ಕಾರ್ಯಕ್ರಮವನ್ನು ವಾರಾಂತ್ಯವಾದ ಜೂನ್ 14, 15 2014 ರಂದು ಆಯೋಜಿಸಲಾಗಿತ್ತು. ಶನಿವಾರದಂದು ನೋಂದಣಿ, ಪರಿಚಯ ಮತ್ತು ಬಿಗುಮಾನ ಪರಿಹಾರ ಕಾರ್ಯಕ್ರಮಗಳ ಅನಂತರ 'ಅಲೆಗಳು ಮತ್ತು ಪ್ರತಿಬಿಂಬ' ಹಾಗು 'ಪೂರ್ವಗ್ರಹ ಮತ್ತು ವಿಮರ್ಶೆ' ಎಂಬ ವಿಷಯಗಳ ಬಗ್ಗೆ ಸಮಾವೇಶಗಳನ್ನು ನಡೆಸಲಾಯಿತು. ಪ್ರತಿಯೊಂದು ಕಾರ್ಯಕ್ರಮಗಳಲ್ಲೂ ಅಭ್ಯಾಸಿಗಳಿಗೆ ತಮ್ಮ ಆತ್ಮಾವಲೋಕನದೊಡನೆ ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುವ ಸಲುವಾಗಿ ಸಾಕಷ್ಟು ಕಾಲಾವಕಾಶ ನೀಡಲಾಗಿತ್ತು. ನಂತರ ವಿಷಯದ ಬಗ್ಗೆ ಕಾರ್ಯಕ್ರಮ ನಡೆಸಲಾಯಿತು. ಹಾಗೆಯೆ ವಿಷಯಕ್ಕೆ ಸಂಬಂದಿ ಸಿದಂತೆ ಗುರುಗಳ ವೀಡಿಯೊ ತುಣುಕನ್ನು ಸಹ ಪ್ರದರ್ಶಿಸಲಾಯಿತು. ಮಧ್ಯಾಹ್ನ, 'ಪ್ರಕೃತಿಯೊಡನೆ ಸಮರಸ', 'ಸರಳವಾಗಿರುವುದೆಂದರೇನು' ಮತ್ತು 'ಆಸೆಗಳಿಗೆ ಹೊರತಾಗಿ ಅವಶ್ಯಕತೆಗಳಿಗೆ ಅನುಗುಣವಾಗಿ ಬದುಕುವುದು ಹೇಗೆ' ಎಂಬ ಕಾರ್ಯಕ್ರಮಗಳ ನಡುವೆ ಕೊಂಚ ಸಮಯವನ್ನು ಸ್ವಯಂ ಸೇವೆಗಾಗಿ ವಿನಿಯೋಗಿಸಲಾಯಿತು.

ಭಾನುವಾರದಂದು ಮೊದಲ ಸಮಾವೇಶ ಹಿರಿಯ ಅಭ್ಯಾಸಿಗಳಿಂದ ಆಯ್ದ ತಂಡದೊಡನೆ ಅನೇಕ ವಿಷಯಗಳನ್ನೊಳಗೊಂಡಂತೆ 'ಸಹಜ ಮಾರ್ಗ ಸಂದೇಶಗಳನ್ನು ಪ್ರಚುರಪಡಿಸುವುದು', 'ಜೀವನವದಲ್ಲಿ ಸಮತೋಲನವನ್ನು ಉಳಿಸಿಕೊಳ್ಳುವುದು' ಹಾಗು 'ಸ್ವಯಂ ಸೇವಕರನ್ನು ಉತ್ತೇಜಿಸುವುದು' ಹೇಗೆ ಎಂಬುದರ ಬಗ್ಗೆ ಚರ್ಚೆ ನಡೆಸಲಾಯಿತು. ಮಧ್ಯಾಹ್ನದ ಭೋಜನದ ನಂತರ ಅಭ್ಯಾಸಿ ಸಹೋದರರೊಬ್ಬರು ಸಹಜಮಾರ್ಗ ಆಕಾಂಕ್ಷಿಗಳಿಗೆ 'ಸ್ವಾಗತ ವಿಭಾಗ' ದಲ್ಲಿ(ವೆಲ್‌ಕಮ್ ಡೆಸ್ಕ್) ಹೇಗೆ ಸ್ಪಂದಿಸಲಾಗುತ್ತದೆ ಎಂದು ತಿಳಿಸಿದರು. ಆಸಕ್ತಿಯುಳ್ಳವರು ಈ ಕೆಲಸವನ್ನು ಮಾಡಲು ತರಬೇತಿಯುನ್ನು ಪಡೆದುಕೊಳ್ಳಬಹುದು ಎಂದು ಸಹ ತಿಳಿಸಿದರು.

ಕೊನೆಯಲ್ಲಿ, ಸಂವಹನ ಮತ್ತು ಅದನ್ನು ಸಮರ್ಥವಾಗಿ ಬಳಸುವ ಪ್ರಾಮುಖ್ಯತೆಯ ಬಗ್ಗೆ ಒಂದು ಆಟದ ಮೂಲಕ ಹಾಗು ಕೆಲವು ಆಯ್ದ ವೀಡಿಯೊ ತುಣುಕುಗಳನ್ನು ಬಿತ್ತರಿಸಿ ತೋರಿಸಿಕೊಡಲಾಯಿತು. ನಂತರದ ಆಶು ಭಾಷಣ ಸ್ಪರ್ಧೆಗೆ ತಂಡಗಳಾಗಿ ತೆರಳುವ ಮುಂಚೆ ಈ ಕಾರ್ಯಕ್ರಮ ಅವರಿಗೆ ಕೆಲವು ಕಲ್ಪನೆಗಳನ್ನು ತೆರೆದಿಟ್ಟಿತು. ಪ್ರತಿ ತಂಡವು ಒಬ್ಬರನ್ನು ಆಯ್ಕೆ ಮಾಡಿ ಸಾರ್ವಜನಿಕವಾಗಿ ಮಾತನಾಡಬೇಕಾಗಿ ಬರುವ ಸಂದರ್ಭಗಳಲ್ಲಿ ತಾವು ಪಡೆದ ಸಲಹೆಗಳನ್ನು ಮನದಟ್ಟು ಮಾಡಿಕೊಂಡು ಒಂದು ವಿಷಯದ ಬಗ್ಗೆ ಮಾತನಾಡುವಂತೆ ಹೇಳಲಾಯಿತು. ಕಾರ್ಯಕ್ರಮದ ಕೊನೆಯಲ್ಲಿ ಅಭ್ಯರ್ಥಿಗಳು ಈ ಒಂದು ಉಪಕ್ರಮದಲ್ಲಿ ತಾವು ಪಾಲ್ಗೊಳ್ಳುವಂತಾದುದಕ್ಕೆ ಸಂತಸವನ್ನು ವ್ಯಕ್ತಪಡಿಸಿದರು.



### ಭಿಲ್ವಾರ, ರಾಜಸ್ಥಾನ

13 ಯುವ ಅಭ್ಯಾಸಿಗಳು ಪಾಲ್ಗೊಂಡಿದ್ದ ಒಂದು ಯುವ ಕಾರ್ಯಕ್ರಮವು ಭಿಲ್ವಾರ ಕೇಂದ್ರದಲ್ಲಿ ಮೇ 27ರಂದು ನಡೆಯಿತು. ಅಭ್ಯರ್ಥಿಗಳು ತಮ್ಮ ಭಂಡಾರಗಳಲ್ಲಿನ ಅನುಭವಗಳ ಬಗ್ಗೆ ಹಾಗು ಮುಂದೆ ಭಂಡಾರಗಳಲ್ಲಿ ಭಾಗವಹಿಸುವ ಮೊದಲು ಹೇಗೆ ತಯಾರಾಗಬೇಕೆಂಬುದರ ಬಗ್ಗೆ ಚರ್ಚಿಸಿದರು. ಭಂಡಾರಗಳಲ್ಲಿ ಭಾಗವಹಿಸುವ ಮೊದಲು ಅಭ್ಯಾಸಿಗಳು ಕೊನೆಯಪಕ್ಷ ಎರಡು ಬೈಠಕ್ಕುಗಳನ್ನು ಪಡೆದುಕೊಂಡಿರಬೇಕೆಂದು ಶಿಫಾರಸ್ಸು ಮಾಡಲಾಯಿತು. ಚರ್ಚೆಗೆ ಬಂದ ಮತ್ತೊಂದು ಬಹು ಮುಖ್ಯ ವಿಚಾರವೆಂದರೆ, ಭಂಡಾರಗಳಲ್ಲಿ ದೊರಕುವ ಸ್ಥಿತಿಯನ್ನು ಆದಷ್ಟೂ ಹೆಚ್ಚು ಕಾಲ ಹೇಗೆ ಉಳಿಸಿಕೊಳ್ಳಬೇಕು ಎಂಬುದು. ತಾವುಗಳು ಭಾಗವಹಿಸುವ ಮುನ್ನ, ಅದು ತಿರುಪ್ಪೂರ್ ಭಂಡಾರವಾಗಿರಲಿ ಅಥವ ಭಿಲ್ವಾರದಲ್ಲಿನ ಆಚರಣೆಯಾಗಿರಲಿ, ತಾವು ಹೀಗೆ ನಿರ್ಧರಿಸಿದಂತೆ ತಯಾರಾಗಿ ಹೋಗುವ ಬಗ್ಗೆ ನಿರ್ಣಯ ಕೈಗೊಂಡರು.

### ವಿಜಯವಾಡ, ಆಂಧ್ರ ಪ್ರದೇಶ

ಮೇ 11 ರಂದು ಆಯೋಜಿಸಿದ್ದ ಯುವ ಸಮಾವೇಶದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಯುವಕರು ಹಾಗು ಇತರೆ ಅಭ್ಯಾಸಿಗಳು ಪಾಲ್ಗೊಂಡಿದ್ದರು. 'ವ್ಯಕ್ತಿತ್ವದ ಬೆಳವಣಿಗೆ' ಮತ್ತು 'ಅಭ್ಯಾಸಿಯ ಜೀವನದಲ್ಲಿ ಹಣದ ಪಾತ್ರ', ಇವು ಚರ್ಚೆಯ ವಿಷಯಗಳಾಗಿದ್ದವು. ತಮ್ಮ ಪ್ರಾರಂಭಿಕ ಪ್ರಾಸ್ತಾವನೆಯಲ್ಲಿ, ಕೇಂದ್ರದ ವ್ಯವಸ್ಥಾಪಕರು, ಯುವಕರಿಗೆ ತಮ್ಮ ಕರ್ತವ್ಯಗಳನ್ನು ನಿಭಾಯಿಸುವ ಲ್ಲಿ ಹೆಚ್ಚು ಲಕ್ಷ್ಯವಿಟ್ಟು, ಯಾವುದೇ ಪೂರ್ವಗ್ರಹಗಳಿಲ್ಲದೆ, ಕ್ರಿಯಾತ್ಮಕರಾಗಿ, ಆಧ್ಯಾತ್ಮಿಕ ಮನೋಭಾವವುಳ್ಳ ಜೀವನ ಶೈಲಿಯೆಡೆಗೆ ಸಾಗಿಸಬಲ್ಲ ಮೌಲ್ಯಾಧಾರಿತ ಹಾದಿಯನ್ನು ಹಿಡಿಯಲು ಆಗ್ರಹಿಸಿದರು. ಸೋ.



ರಾಮಚಂದ್ರರು ತಮ್ಮ ಭಾಷಣದಲ್ಲಿ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಮಾನವ ಪ್ರಜ್ಞೆಯ ಬಗ್ಗೆ ಶ್ರೇಣಿಗಳನ್ನು ತೆರೆದಿಟ್ಟರು. ಯುವ ಅಭ್ಯಾಸಿಗಳಿಂದ ಹತ್ತು ಪ್ರಸ್ತುತಿಗಳ ನಂತರ ಒಂದು ಗುಂಪು ಚರ್ಚೆಯ ಕಾರ್ಯಕ್ರಮವಿತ್ತು. ಈ ಹತ್ತು ಪ್ರಸ್ತುತಿಗಳೂ, ಆಧ್ಯಾತ್ಮಿಕ ಪರಿಕಲ್ಪನೆಗಳು ಮತ್ತು ಸ್ವಾನುಭವಗಳ ಹದವಾದ ಮಿಶ್ರಣದಿಂದ ಕೂಡಿದ್ದವು. ಅಭ್ಯಾಸಿಗಳು ತಮ್ಮ ಮುಂದಿನ ಪ್ರಯತ್ನಗಳಿಗೆ ಅತ್ಯಂತ ಉಪಯೋಗವೆನಿಸುವಂತಹ ಅನೇಕ ವಿಷಯಗಳಲ್ಲಿ, ಮಹತ್ವದ ಆಂತರಿಕ ಅರಿವನ್ನು ಪಡೆದರೆಂದು ಅಭಿಪ್ರಾಯಪಟ್ಟರು. ಪ್ರೇಮದ ಬಗೆಗಿನ ಗುರುಗಳ ಸಂದೇಶವುಳ್ಳ ವಿಡಿಯೊ ಪ್ರದರ್ಶನದೊಂದಿಗೆ ಸಮ್ಮೇಳನ ಅದ್ಭುತವಾಗಿ ಸಮಾಪ್ತಿಯಾಯಿತು. ದೈವೀ ಪ್ರಭೆಯ ಉಪಸ್ಥಿತಿ ಕಾರ್ಯಕ್ರಮದುದ್ದಕ್ಕೂ ಅನುಭವಕ್ಕೆ ಬಂದಿತು.

## ಕೊತಗುಡಮ್ (ಆಂಧ್ರಪ್ರದೇಶ)



ಆಧ್ಯಾತ್ಮಿಕ ಮೌಲ್ಯಗಳ ತಿಳುವಳಿಕೆಯನ್ನು ಉತ್ತಮಗೊಳಿಸಿಕೊಂಡು ಹಾಗು ವೃದ್ಧಿಗೊಳಿಸಿಕೊಳ್ಳಲು ಮತ್ತು ಮಿಷನ್ನಿನ ಚಟುವಟಿಕೆಗಳಲ್ಲಿ ತಮ್ಮ ಪಾತ್ರವನ್ನು ಅರಿಯುವಂತೆ ಮಾಡುವ ಉದ್ದೇಶದೊಡನೆ ಕೊತಗುಡಮ್ ಆಶ್ರಮದಲ್ಲಿ ಯುವ ಸಂಪರ್ಕ ಕಾರ್ಯಕ್ರಮವನ್ನು ಏಪ್ರಿಲ್ 20, 2014ರಂದು ಹಮ್ಮಿಕೊಳ್ಳಲಾಗಿತ್ತು. ಅಸ್ವಪುರಮ್, ಭದ್ರಾಚಲಂ ಮತ್ತು ಪೊಲ್ವಾಂಚ ಕೇಂದ್ರಗಳಿಂದಲೂ ಅಭ್ಯಾಸಿಗಳು ಭಾಗವಹಿಸಿದ್ದರು. ಅದೊಂದು ಪೂರ್ಣ ದಿನದ ಕಾರ್ಯಕ್ರಮವಾಗಿದ್ದು ಚರ್ಚೆ ಆಧಾರಿತ ಚಟುವಟಿಕೆಗಳೊಡನೆ ಪ್ರಾರಂಭವಾಯಿತು. ಮೊದಲಿಗೆ 'ತಾರುಣ್ಯವೇಕೆ ಪರಿಶ್ರಮ ಮತ್ತು ಪ್ರತಿಜ್ಞೆಗೆ ಸಕಾಲ?', 'ಯುವಕರಾಗಿ ನಿಮ್ಮ ಆದರ್ಶ ಏನಿರಬೇಕು?', 'ಯುವ ಸಮೂಹಗಳ ಉದ್ದೇಶ ಮತ್ತು ಸ್ವರೂಪ ಏನಿರಬೇಕು?', 'ಸಹಜಮಾರ್ಗದ ಯುವಕರನ್ನು ಪ್ರೇರೇಪಿಸಲು, ಉತ್ತೇಜಿಸಲು, ಪರಸ್ಪರ ಒಗ್ಗೂಡಿಸಲು ಯಾವ ಬಗೆಯ ಚಟುವಟಿಕೆಗಳನ್ನು ನಡೆಸಬಹುದು?', ಮತ್ತು 'ಯುವಕರು ಮಿಷನ್ನಿನ ಚಟುವಟಿಕೆಗಳಲ್ಲಿ ಹೇಗೆ ತೊಡಗಿಸಿಕೊಳ್ಳಬಹುದು?' ಎಂಬ ವಿಷಯಗಳಿದ್ದವು. ತಮ್ಮ ಮಾನಸಿಕ ಹಾಗು ದೈಹಿಕ ಸಾಮರ್ಥ್ಯವನ್ನು ಬಳಸಿಕೊಂಡು ಹೇಗೆ ಇತರರಿಗೆ ಮಾದರಿಯಾಗಬಹುದೆಂದು ಯುವ ಅಭ್ಯಾಸಿಗಳು ಬಹಳ ಆಸಕ್ತಿ ಹಾಗು ಸಂತೋಷದಿಂದ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಈ ಅವಧಿಗಳ ಕಾರ್ಯಕ್ರಮಗಳು ಪ್ರಾತ್ಯಕ್ಷಿಕೆಗಳನ್ನೊಳಗೊಂಡಿದ್ದು ಯುವ ಅಭ್ಯಾಸಿಗಳು ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಸಾಧ್ಯವಾಯಿತು.

## ವಾರಣಾಸಿ, ಉತ್ತರಪ್ರದೇಶ

ಮೇ 11, 2014ರಂದು ಪೂರ್ಣದಿನದ ಕಾರ್ಯಕ್ರಮವನ್ನು ವಾರಣಾಸಿ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಅಭ್ಯಾಸಿಗಳಲ್ಲಿ ಮಿಷನ್ನಿನ ಸಾಹಿತ್ಯವನ್ನು ಓದುವ ಹವ್ಯಾಸವನ್ನು ಬೆಳೆಸಲು ಈ ಕೇಂದ್ರದಲ್ಲಿ ಆಯ್ದ ಪುಸ್ತಕಗಳ ಮೇಲೆ ರಸಪ್ರಶ್ನೆ ಕಾರ್ಯಕ್ರಮವನ್ನು ಏರ್ಪಡಿಸಲಾಗುತ್ತಿದೆ. ಕಳೆದ ಎರಡು ಅವಧಿಗಳಿಗೆ ಮತ್ತು ಕೊನೆಯದಾಗಿ 11ನೇ ತಾರೀಖಿನ ಕಾರ್ಯಕ್ರಮಕ್ಕೆ ಆಯ್ದುಕೊಳ್ಳಲಾಗಿದ್ದ ಪುಸ್ತಕ 'ನನ್ನ ಗುರುದೇವ'. ಅಭ್ಯಾಸಿಗಳಿಗೆ 50 ಪ್ರಶ್ನೆಗಳನ್ನು ನೀಡಿ ಉತ್ತರಿಸಲು ಅರ್ಧ ಗಂಟೆಯ ಸಮಯಾವಕಾಶ ಕೊಡಲಾಗಿತ್ತು. ಅರ್ಧ ಗಂಟೆಯ ನಂತರ ಸರಿಯಾದ ಉತ್ತರಗಳನ್ನು ಪುಸ್ತಕದ ಆಧಾರದ ಮೇಲೆ ವಿವರಿಸಲಾಯಿತು. ಅಭ್ಯಾಸಿಗಳಿಗೆ ಮಿಷನ್ನಿನ ಪುಸ್ತಕಗಳನ್ನು ಸಮಗ್ರವಾಗಿ ಓದುವ ಅಗತ್ಯದ ಅರಿವಾಯಿತು. ಊಟದ ನಂತರ ನನ್ನ ಗುರುದೇವ ಗ್ರಂಥದಿಂದ ಆಯ್ಕೆ ಮಾಡಿದ ಕೆಲ ವಿಷಯಗಳ ಮೇಲೆ ಚರ್ಚೆ ಇತ್ತು. ಈ ಎಲ್ಲಾ ಚಟುವಟಿಕೆಗಳಿಂದಾಗಿ ಅಭ್ಯಾಸಿಗಳು ಇಡೀ ದಿನ ಉತ್ಸಾಹ ಹಾಗು ಆನಂದದಿಂದ ಪೂರ್ಣ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಮಾಡಿತು. ಇದರಿಂದ ಸಂಜೆಯ ಸತ್ಸಂಗಕ್ಕೆ ಹಾಜರಾತಿಯೂ ಹೆಚ್ಚಾಯಿತು.

## ಹೃದಯದಿಂದ ಹೃದಯಕ್ಕೆ, ಇಂದೋರ್, ಮಧ್ಯಪ್ರದೇಶ

ಜೂನ್ 15, 2014 ರಂದು ಇಂದೋರ್ ಆಶ್ರಮದಲ್ಲಿ ಹೃದಯದಿಂದ ಹೃದಯಕ್ಕೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಪೂರ್ವಭಾವಿ ಸಿದ್ಧತೆಯನ್ನು ಒಂದು ತಿಂಗಳ ಹಿಂದೆಯೇ ಪ್ರಾರಂಭಿಸಿದ್ದು, ಎಲ್ಲಾ ಅಭ್ಯಾಸಿಗಳೂ ತಮಗೆ ಸಾಮಾಜಿಕ ಹಾಗು ವ್ಯಾವಹಾರಿಕವಾಗಿ ಪರಿಚಯವಿರುವ ಮತ್ತು ಆಧ್ಯಾತ್ಮದಲ್ಲಿ ಆಸಕ್ತಿಯಿರುವ ಸ್ನೇಹಿತರ ಪಟ್ಟಿಯನ್ನು ಮಾಡಿಕೊಡುವಂತೆ ವಿನಂತಿಸಿಕೊಳ್ಳಲಾಗಿತ್ತು. ಇದರಿಂದಾಗಿ ಸುಮಾರು 300 ಜನರ ಪಟ್ಟಿ ಸಿದ್ಧವಾಗಿ , ಇವರೆಲ್ಲರನ್ನೂ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ಆಸಕ್ತರು ಭಾಗವಹಿಸಿ ಈ ಕಾರ್ಯಕ್ರಮದ ಲಾಭ ಪಡೆಯುವಂತೆ ಸ್ವಯಂಸೇವಕರು ಮುತುವರ್ಜಿ ವಹಿಸಿದರು.

ಸುಮಾರು 180 ಜನರು ಜೂನ್ 15ರ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಮುಖ್ಯ ಭಾಷಣವು 'ಆಧ್ಯಾತ್ಮಿಕತೆ ಜೀವನದ ಪ್ರಥಮ ಆದ್ಯತೆ' ಎಂಬ ವಿಷಯದ ಮೇಲಿದ್ದಿತು. ಈ ವಿಚಾರವನ್ನು ಅನೇಕ ಉದಾಹರಣೆಗಳೊಡನೆ ಸಾದ್ಯಂತವಾಗಿ ವಿವರಿಸಲಾಯಿತು. ನಂತರ ಸಹಜಮಾರ್ಗ ಮತ್ತದರ ತತ್ವದ ಕುರಿತು ಪ್ರಸ್ತುತಿಯಿತ್ತು. ಇದಾದ ನಂತರ ಪ್ರಶ್ನೋತ್ತರ ಕಾರ್ಯಕ್ರಮವಿದ್ದು, ಸುಮಾರು 40 ಜನರು ಅಭ್ಯಾಸ ಪ್ರಾರಂಭಿಸಲು ಆಸಕ್ತಿ ತೋರಿದರು. ಪ್ರಾರಂಭಿಕ ಬೈಠಕ್ ಪಡೆಯಲು ಬಯಸಿದ ಆಸಕ್ತರಿಗಾಗಿಯೇ, ಧ್ಯಾನ ಮಂದಿರದಲ್ಲಿ ಪ್ರತ್ಯೇಕವಾದ ಸ್ವಯಂಸೇವಕರ ತಂಡವೊಂದು ಸಿದ್ಧವಾಗಿ, ನೆರವು ನೀಡಿತು. ಊಟದ ಸಮಯದಲ್ಲಿ ಹತ್ತು ಅಭ್ಯಾಸಿಗಳ ತಂಡವೊಂದು ಅವರೊಡನೆ ಮಾತನಾಡುತ್ತ ಅವರೆಲ್ಲಾ ಪ್ರಶ್ನೆಗಳಿಗೂ ಉತ್ತರಿಸಿದರು.

ಇದು ನಮ್ಮ ಸ್ವಯಂಸೇವಕರ ತಂಡಕ್ಕೆ ಗುರುಗಳಿಗೆ ಸೇವೆ ಸಲ್ಲಿಸುವ ಒಂದು ಸದವಕಾಶವಾಗಿ ಪರಿಣಮಿಸಿತು. 30 ಜನ ಸಹೋದರ ಸಹೋದರಿಯರ ತಂಡ ಈ ಕಾರ್ಯಕ್ರಮದ ಯಶಸ್ಸಿಗೆ ಎಲ್ಲಾ ಬಗೆಯ ವ್ಯವಸ್ಥೆಗಳನ್ನು ಮಾಡಿದ್ದರು.





## ಬೇಸಿಗೆ ಶಿಬಿರಗಳು

ಏಪ್ರಿಲ್ ಮತ್ತು ಮೇ ತಿಂಗಳುಗಳಾದ್ಯಂತ ದೇಶದ ಅನೇಕ ಕೇಂದ್ರಗಳಲ್ಲಿ ಬೇಸಿಗೆ ಶಿಬಿರಗಳು ನಡೆದವು. ಎಲ್ಲಾ ಕೇಂದ್ರಗಳಲ್ಲೂ ಈ ಶಿಬಿರಗಳು ಸಮರ್ಪಣಾ ಮನಸ್ಸಿನಿಂದ ತೊಡಗಿಸಿಕೊಂಡ ಸ್ವಯಂಸೇವಕರಿಂದಾಗಿ ಸಮರ್ಪಕವಾಗಿ ನಡೆದವು. ಈ ಶಿಬಿರಗಳು ಮಕ್ಕಳಲ್ಲಿ ಮೌಲ್ಯಗಳನ್ನು ಉತ್ತೇಜಿಸುವ ಹಾಗು ಬೆಳೆಸುವ ಉದ್ದೇಶ ಹೊಂದಿತ್ತು. ಇದರಲ್ಲಿ ಛಾಯಾಚಿತ್ರ ಕಾರ್ಯಾಗಾರ, ಸಂಗೀತ, ಚಿತ್ರಕಲೆ, ಕಥೆ ಹೇಳುವುದು, ನಿಧಿ ಶೋಧನೆ, ಕಾಗದದ ಚೀಲಗಳ ತಯಾರಿ, ಸಿನಿಮಾ, ರಸಪ್ರಶ್ನೆ, ಹಬ್ಬಗಳು, ಕಿರು ವಿಜ್ಞಾನ ಜಾತ್ರೆಗಳು, ದಾರದಿಂದ ಬಣ್ಣ ಹಾಕುವುದು, ಅನಿಮೇಶನ್, ಕಾಗದದಿಂದ ಒಡವೆ ತಯಾರಿ ಇತ್ಯಾದಿ ಚಟುವಟಿಕೆಗಳಿಂದ ಮಕ್ಕಳನ್ನು ಇದರಲ್ಲಿ ಮಗ್ನಗೊಳಿಸಲಾಗಿತ್ತು. ಮೌಲ್ಯಾಧಾರಿತ ವಿಷಯಗಳ ಮೇಲೆ ಆಟಗಳು, ಚಟುವಟಿಕೆಗಳು, ಮೂಕಾಭಿನಯ ಮತ್ತು ಕಿರುನಾಟಕಗಳು ಮೌಲ್ಯಗಳನ್ನು ತಮಾಷೆಯಾಗಿಯೇ ಕಲಿಯುವಂತೆ ಮಾಡಿತು. ಚರ್ಚೆಗಳು, ಪ್ರಸ್ತುತಿಗಳು, ವಿಡಿಯೋಗಳು ಹಿರಿಯ ಮಕ್ಕಳಿಗಾಗಿ ನಡೆದವು. ಇನ್ನು ಕೆಲ ಕೇಂದ್ರಗಳಲ್ಲಿ ಯುವ ಆಸಕ್ತರಿಗೆ ಆಧ್ಯಾತ್ಮದ ಪರಿಚಯ ಮಾಡಲು ಅನುವಾಯಿತು.

**ಮುಂಬೈಯ** ಪನವೇಲ್‌ನ ಬಿಎಮ್‌ಎ ಆಶ್ರಮದಲ್ಲಿ ಮೂರು ದಿನದ ಬೇಸಿಗೆ ಶಿಬಿರದಲ್ಲಿ 110 ಮಕ್ಕಳು ಭಾಗವಹಿಸಿದ್ದರು. ಕೊನೆಯ ದಿನದಂದು ಪ್ರತಿಯೊಬ್ಬರಿಗೂ ಮತ್ತೊಬ್ಬರ ಒಂದು ಸಕಾರಾತ್ಮಕ ಗುಣವನ್ನು ತಮ್ಮ ಕರವಸ್ತ್ರದಲ್ಲಿ ಬರೆದು ಕೊಡಲು ಹೇಳಲಾಯಿತು. ಇದನ್ನು ಮಕ್ಕಳು ಸ್ಮರಣಿಕೆಗಳಾಗಿ ತೆಗೆದುಕೊಂಡು ಹೋದರು. ಸುಮಾರು 30 ಮಕ್ಕಳು **ರಾಯಚೂರಿನ** ಆಶ್ರಮದಲ್ಲಿ ನಡೆದ 2 ದಿನದ ಶಿಬಿರದಲ್ಲಿ ಪಾಲ್ಗೊಂಡರು. ಎಲ್ಲರು ಅತ್ಯಂತ ಸಂತೋಷದಿಂದ ಭಾಗವಿಸಿದ್ದಲ್ಲದೆ ಇದರಿಂದ ತಾವು ಬಹಳ ಕಲಿತಿದ್ದು ಶಿಬಿರವನ್ನು ಮತ್ತಷ್ಟು ದಿನ ಮುಂದುರೆಸಲು ಕೇಳಿಕೊಂಡರು.

ಉತ್ತರ ಪ್ರದೇಶದ **ಸೀತಾಪುರ**ದಲ್ಲಿ ನಡೆದ 9 ದಿನದ ಶಿಬಿರದಲ್ಲಿ ವಿವಿಧ ಶಾಲೆಗಳ 60 ಮಕ್ಕಳು ಭಾಗವಹಿಸಿದ್ದರು. ಯುವ ಆಸಕ್ತರಿಗೆ ಆಧ್ಯಾತ್ಮ ವಿಚಾರಗಳನ್ನು ಪರಿಚಯಿಸುವ ಉದ್ದೇಶದಿಂದ **ಬಿಕನೇರ್**ನ ಅಭ್ಯಾಸಿಯೊಬ್ಬರ ಮನೆಪಾಠದ ಕೇಂದ್ರದಲ್ಲಿ, ಯು-ಕನೆಕ್ಟ್ ತಂಡದಿಂದ ಹತ್ತು ದಿನಗಳ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಕೆಲ ಸಾಮಾನ್ಯ ಜ್ಞಾನ ಸಂಬಂಧಿಸಿದ ಮತ್ತು ವ್ಯಕ್ತಿತ್ವ ನಿರ್ಮಾಣಕ್ಕೆ ಪೂರಕವಾದ ವಿಚಾರಗಳ ಮೇಲೆ ಭಾಷಣಗಳಿದ್ದವು.

ಕರ್ನಾಟಕದ **ಬೆಂಗಳೂರಿನ** ಬನಶಂಕರಿಯ ಆಶ್ರಮದಲ್ಲಿನಡೆದ ಶಿಬಿರದಲ್ಲಿ ಸುಮಾರು ಅರವತ್ತು ಮಕ್ಕಳು ಭಾಗವಹಿಸಿದ್ದರು.

ಪ್ರೇರಣಾದಾಯಕ ಭಾಷಣಗಳು, ಆನಂದದಾಯಕ ಚಟುವಟಿಕೆಗಳ ಜತೆಗೆ ಅಗ್ನಿ ಸುರಕ್ಷೆ ಮತ್ತು ವಿಪತ್ತು ನಿರ್ವಹಣಾ ಕ್ರಮಗಳ ಬಗೆಗೆ ಒಂದು ಕಾರ್ಯಕ್ರಮವನ್ನು ತಮಿಳುನಾಡಿನ **ತಿರುಚಿ**ಯಲ್ಲಿ ನಡೆದ ಶಿಬಿರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಮತ್ತು ಮಕ್ಕಳನ್ನು ಜಾನಕಿ ಫಾರಂಗೆ ಪ್ರವಾಸ ಮಾಡಿಸಲಾಯಿತು. ಅಲ್ಲಿ ಅವರು ಬೆಲ್ಲ ತಯಾರಿಸುವುದನ್ನು ಅಚ್ಚರಿಯ ವಿದ್ಯಮಾನದಂತೆ ವೀಕ್ಷಿಸಿದರು.

**ಮಣಪ್ಪಾಕ್ಕಂ** ಆಶ್ರಮದಲ್ಲಿ ನಡೆದ ಮೂರು ದಿನದ ಶಿಬಿರದಲ್ಲಿ ಭಾಗವಹಿಸಿದ ಪ್ರತಿಯೊಬ್ಬರಿಗೂ ಗಿಡವೊಂದನ್ನು ಕೊಟ್ಟು ಅದನ್ನು ತಮ್ಮ ಮನೆಯಲ್ಲಿ ಪ್ರೀತಿಯಿಂದ ಬೆಳೆಸಲು ಹೇಳಲಾಯಿತು. ಅದರ ಬೆಳವಣಿಗೆಯ ಜತೆಗೆ ತಾವೂ ಬೆಳೆದು ಸಮತೋಲನದ ಬದುಕಿಗೆ ಪ್ರೇರೇಪಣೆ ಪಡೆಯಲಿ ಎಂಬುದು ಇದರ ಉದ್ದೇಶವಾಗಿತ್ತು. ಶಿಬಿರಾರ್ಥಿಗಳು ಮೇಪೋಲ್ ನೃತ್ಯ, ಯುರೋಪ್‌ನ ಸಾಂಪ್ರದಾಯಿಕ ನೃತ್ಯಗಳಲ್ಲಿ ಭಾಗವಹಿಸಿದರು. ಬಹುತೇಕ ಮಕ್ಕಳು ಅವರು ಶಿಬಿರದ ದಿನಚರಿ ಪುಸ್ತಕದಲ್ಲಿ ಪ್ರತಿದಿನದ ಆತ್ಯಂತಿಕ ಕ್ಷಣಗಳನ್ನು ದಾಖಲಿಸಿಕೊಂಡರು. ಗುರುಗಳ ಪ್ರೇಮಮಯ ಕೃಪೆಗೆ ಕೃತಜ್ಞತೆಯ ಕುರುಹಾಗಿ ಮಕ್ಕಳ ಗುಂಪಿನ ಛಾಯಾಚಿತ್ರ, ಒಂದು ಸಸಿ,







ಮಕ್ಕಳೇ ತಯಾರಿಸಿದ ಕಾಗದದ ಚೀಲವನ್ನು ಪೂಜ್ಯ ಗುರುಗಳಿಗೆ ಅರ್ಪಿಸಲಾಯಿತು.

**ಗೋಲ ಗೋಕರಣ್** ನಾಥ ಆಶ್ರಮದಲ್ಲಿ ನಡೆದ ಹತ್ತು ದಿನದ ಶಿಬಿರದಲ್ಲಿ ಐವತ್ತೊಂದು ಆಸಕ್ತ ಮಕ್ಕಳು ಭಾಗವಹಿಸಿದರು. ಶಿಬಿರದಲ್ಲಿ, 'ಲರ್ನಿಂಗ್ ಟು ಬಿ' ಎಂಬ ಯುನೆಸ್ಕೋದ ಪುಸ್ತಕದ ಅಧ್ಯಾಯಗಳನ್ನು ಪ್ರತಿದಿನ ಅಭ್ಯಾಸಿ ಸೋದರ ಸೋದರಿಯರು ವಿವರಿಸುತ್ತಿದ್ದರು. ಅಂತೆಯೆ, ಆರೋಗ್ಯ, ಸುರಕ್ಷೆ, ಬ್ಯಾಂಕಿಂಗ್, ಅರಣ್ಯ, ಆರಕ್ಷಕ, ರೇಲ್ವೆ ಇತ್ಯಾದಿ ಇಲಾಖೆಗಳಿಂದ ಆಗಮಿಸಿದ ಅತಿಥಿಗಳು ತಮ್ಮ ಪ್ರಾವೀಣ್ಯತೆಯ ವಿಷಯದ ಬಗೆಗೆ ಉಪನ್ಯಾಸಗಳನ್ನು ನೀಡಿದರು.

ಆಂಧ್ರಪ್ರದೇಶದ **ವಿಶಾಖಪಟ್ನಂ**ನಲ್ಲಿ ಆಯೋಜಿಸಲಾದ ಮೂರು ದಿನದ ಶಿಬಿರದಲ್ಲಿ ವಿವಿಧ ವಯೋಮಾನದ 120 ಮಕ್ಕಳು ಪಾಲ್ಗೊಂಡರು. ಶಿಲ್ಪಕಲೆ ಹಾಗು ದಿನಪತ್ರಿಕೆಯಿಂದ ಗಾಳಿಪಟ ಮಾಡುವುದನ್ನು ಕಲಿಯುವುದರ ಜೊತೆಗೆ ಮೌಲ್ಯಾಧಾರಿತ ಚಟುವಟಿಕೆಗಳು ಅಡಕವಾಗಿದ್ದುವು. ಭಾಗಿಗಳಿಗೆ ವೈದ್ಯಕೀಯ ಪ್ರಥಮ ಚಿಕಿತ್ಸೆ ಮತ್ತು ಸುರಕ್ಷೆಯ ಲಘು ಪರಿಚಯ ಮಾಡಿಕೊಡಲಾಯಿತು.

ಮಧ್ಯಪ್ರದೇಶದ **ಇಂದೋರಿನಲ್ಲಿ** ನಡೆದ ಶಿಬಿರದಲ್ಲಿ ನಲವತ್ತು ಮಕ್ಕಳು ಭಾಗವಹಿಸಿದರು. ಏಕತಾಭಾವ ಮತ್ತು ಭ್ರಾತೃತ್ವವನ್ನು ಬಿಂಬಿಸುವ ಸಮೂಹಗೀತೆಯನ್ನು ಅವರು ಪ್ರತಿದಿನ ಹಾಡುತ್ತಿದ್ದರು. ಕೊನೆಯ ದಿನದಂದು ಆಶ್ರಮವು ಇತ್ತೀಚೆಗೆ ಖರೀದಿಸಿದ, ಮರಗಳಿಂದ ತುಂಬಿದ ಹೊಸ ಜಾಗದಲ್ಲಿ ಮಕ್ಕಳು ವನವಿಹಾರದ ಆನಂದವನ್ನು ಅನುಭವಿಸಿದರು.

ಮಕ್ಕಳು ಈ ರೀತಿಯ ಬೇಸಿಗೆ ಶಿಬಿರದಲ್ಲಿ ಪಾಲ್ಗೊಳ್ಳುತ್ತಿರಲು ಹರ್ಷವನ್ನು ವ್ಯಕ್ತಪಡಿಸಿದರು ಮತ್ತು ಬಹಳಷ್ಟು ಕೇಂದ್ರಗಳಲ್ಲಿ ಶಿಬಿರದ ಅವಧಿಯನ್ನು ವಿಸ್ತರಿಸುವಂತೆ ಕೇಳಿಕೊಂಡರು. ಸ್ವಯಂಸೇವಕರೂ ಸೇರಿದಂತೆ ಶಿಬಿರದಲ್ಲಿ ಭಾಗವಹಿಸಿದವರೆಲ್ಲರಿಗೆ ಇದು ಉತ್ತಮ ಕಲಿಕೆ ಮತ್ತು ಆನಂದದ ಅನುಭವವನ್ನು ದೊರಕಿಸಿಕೊಟ್ಟಿತು.

## ಪ್ರಕಟಣೆ

ಇದುವರೆಗೆ ಕ್ರೆಸ್ಟ್ ಆಗಿ ನಿರ್ವಹಿಸಲ್ಪಡುತ್ತಿದ್ದ, ಪಶ್ಚಿಮ ಬಂಗಾಳದ ಖರಗ್‌ಪುರದ ಸ್ಥಳವನ್ನು ಈಗ ರಿಟ್ರೀಟ್ ಕೇಂದ್ರವನ್ನಾಗಿ ಮಾಡಲಾಗಿದೆ. ಈಗಾಗಲೇ ಕೇರಳದ ಮಲಂಪುರ ಮತ್ತು ಮಹಾರಾಷ್ಟ್ರದ ಪುಣೆಯಲ್ಲಿ ಕಾರ್ಯನಿರತವಾದ ಎರಡು ರಿಟ್ರೀಟ್ ಕೇಂದ್ರಗಳ ಸಾಲಿಗೆ ಇದು ಸೇರುತ್ತದೆ. ಖರಗ್‌ಪುರದ ಈ ಕೇಂದ್ರವು ಮುಖ್ಯವಾಗಿ ಉತ್ತರ ಮತ್ತು ಪೂರ್ವಭಾರತದ ಅಭ್ಯಾಸಿಗಳಿಗೆ ಸೇವೆ ಸಲ್ಲಿಸಲು ನಿರ್ಮಿತವಾಗಿದೆ. ಸಂಶೋಧನೆ, ಶಿಕ್ಷಣ, ಸಾಧನೆ ಮತ್ತು ತರಬೇತಿಗಳನ್ನು ಬೆಂಗಳೂರಿನ ಕ್ರೆಸ್ಟ್, ಸದ್ಯಕ್ಕೆ ದೇಶದಲ್ಲಿ ಏಕೈಕ ಕೇಂದ್ರವಾಗಿ ಮುಂದುವರೆಸಲಿದೆ.

## ಭಿಲ್ವಾರ, ರಾಜಸ್ಥಾನ

ಭಿಲ್ವಾರ ಕೇಂದ್ರದಲ್ಲಿ ಎರಡು ದಿನಗಳ ಮೌಲ್ಯಾಧಾರಿತ ಕಾರ್ಯಕ್ರಮವನ್ನು ಮಕ್ಕಳಿಗಾಗಿ ನಡೆಸಲಾಯಿತು. ಮೇ 11ರಂದು, ಚಲನಚಿತ್ರ ಪ್ರದರ್ಶನದ ನಂತರ ಭಾಗಿಗಳ ನಡುವಿನ ಸಂವಹನವನ್ನು ಹೆಚ್ಚಿಸಲು ಕೆಲವು ಆಟಗಳನ್ನು ಆಡಿಸಲಾಯಿತು. ಮೇ 17ರಂದು ಹದಿ ಮೂರರಿಂದ ಹದಿನೇಳು ವಯೋಮಾನದ ಸುಮಾರು ಎಂಬತ್ತು ಮಕ್ಕಳು ಹಾಗು ಹದಿನೈದು ಶಿಕ್ಷಕರು ಪಾಲ್ಗೊಂಡಿದ್ದರು.

ಗುರುಗಳ ಡಿವಿಡಿ ಪ್ರದರ್ಶನದೊಂದಿಗೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ, ಮೌಲ್ಯಾಧಾರಿತ ವಿಡಿಯೋಗಳನ್ನು ಭಾಗಿಗಳಿಗೆ ತೋರಿಸಿ, ಅದರಿಂದ ಅವರು ಯಾವ ನೀತಿಯನ್ನು ಕಲಿತರೆಂದು ಕೇಳಿದರು.

ಭೋಜನದ ನಂತರ ಗುರುಗಳ ಉಪನ್ಯಾಸವನ್ನು ಆಲಿಸಲಾಯಿತು. ಧನಾತ್ಮಕ ಮನೋಭಾವದ ಅವಶ್ಯಕತೆಯ ಬಗೆಗಿನ ಉಪನ್ಯಾಸದ ನಂತರ, ಪ್ರೇಮ, ತ್ಯಾಗ ಹಾಗು ನಿಜಜೀವನದ ಘಟನೆಗಳನ್ನು ಆಧರಿಸಿದ ನಾಟಕಪ್ರದರ್ಶನವಿದ್ದಿತು. ಗುರುವಿನ ಪ್ರಾಮುಖ್ಯತೆಯನ್ನು ತೋರಿಸುವ ಕೊಳವೆ ಮತ್ತು ಚೆಂಡಿನಾಟವು ಭ್ರಾತೃತ್ವ, ಪ್ರೇಮ, ತಂಡೋತ್ಸಾಹ ಮತ್ತು ಸಾಮರಸ್ಯವನ್ನು ಪ್ರತಿಪಾದಿಸಿತು. ಕಾರ್ಯಕ್ರಮದ ಕೊನೆಯಲ್ಲಿ ಗುರುವಿನ ಪ್ರಾಮುಖ್ಯತೆಯನ್ನು ಚರ್ಚಿಸಲಾಯಿತು. ಕಾರ್ಯಕ್ರಮವನ್ನು ಎಲ್ಲರೂ ಆನಂದಿಸಿದರು.







## ಮುಂಬಯಿ, ಮಹಾರಾಷ್ಟ್ರ

23 ನೇ ಮೇ 2014ರಂದು, ಜುಹೂನ ಬಿಲ್ಲಾಬೊಂಗ್ ಹೈ ಅಂತರರಾಷ್ಟ್ರೀಯ ಮಾಧ್ಯಮಿಕ ಶಾಲೆಯಲ್ಲಿ,ಸುಮಾರು 25 ಶಿಕ್ಷಕರಿಗಾಗಿ ಮೌಲ್ಯಾಧಾರಿತ ಶಿಕ್ಷಣದ ಬಗ್ಗೆ ಮಾಹಿತಿಪರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಪ್ರಿನ್ಸಿಪಾಲರು, ಈ ಶಾಲೆಯಲ್ಲಿ ಮೌಲ್ಯಾಧಾರಿತ ವರ್ಗಗಳನ್ನು ನೆರವೇರಿಸಲು ಸ್ವಯಂಸೇವಕರನ್ನು ಆಮಂತ್ರಿಸಿದ್ದರು. ಕಾರ್ಯಕ್ರಮದ ಪ್ರಾರಂಭ, ಸೋ. ರಾಖಿಯವರ ಮೌಲ್ಯಾಧಾರಿತ ಶಿಕ್ಷಣದ ಬಗೆಗಿನ ಪರಿಚಯ ಭಾಷಣದೊಂದಿಗೆ ಆಯಿತು. ನಂತರ ಸೋ. ಲಲಿತಾ ಅವರು,ಇಂದಿನ ಸಮಾಜದ ಮೇಲೆ ಆಗುತ್ತಿರುವ ಕೆಡುಕುಗಳ ಪ್ರಭಾವ ಹಾಗು ಮಕ್ಕಳು ಆಂತರಿಕವಾಗಿ ಪ್ರಬಲರಾಗಲು ಮನೆಗಳಲ್ಲಿ ಹಾಗು ಶಾಲೆಗಳಲ್ಲಿ ಮೌಲ್ಯಾಧಾರಿತ ಶಿಕ್ಷಣದ ಆವಶ್ಯಕತೆಯ ಬಗ್ಗೆ ಮಾತನಾಡಿದರು. ಇದಾದ ನಂತರ "ತಂದೆ ಮತ್ತು ಮಗ"ಎಂಬ ಕಥೆಯ ವಿಡಿಯೊ ಪ್ರದರ್ಶಿಸಲಾಯಿತು. ಈ ಕಥೆಯು ಬಹಳ ಹೃದಯಸ್ಪರ್ಶಿಯಾಗಿದ್ದು, ಶಿಕ್ಷಕರು, ಪಾಲಕರು ಹಾಗು ಶಿಕ್ಷಕರು ಮಕ್ಕಳಿಗಾಗಿ ಸಾಕಷ್ಟು ವೇಳೆಯನ್ನಿತ್ತು ಅವರಿಗೆ ವಿಷಯದ ತಿಳಿವಳಿಕೆಯನ್ನೀಯುವುದು ಹಾಗು ಯೋಗ್ಯಮಾರ್ಗದಲ್ಲಿ ನಡೆಯಲು ಮಾರ್ಗದರ್ಶನ ಮಾಡುವ ಆವಶ್ಯಕತೆಯನ್ನು ಮನಗಂಡರು. ಈ ಕಾರ್ಯಕ್ರಮದ ನಂತರ ಕೆಲ ಶಿಕ್ಷಕರು ಸ್ವಯಂಸೇವಕರೊಂದಿಗೆ ಮಾಹಿತಿಪರ ಚರ್ಚೆ ಮಾಡಿದರು. ಕೆಲವರು ವಿಷಯವನ್ನು ಅರಿತುಕೊಳ್ಳಲು ಹಾಗು ಧ್ಯಾನವನ್ನು ಪ್ರಾರಂಭಿಸಲು ಆಸಕ್ತಿಯನ್ನು ತೋರಿಸಿದರು.

## ಕಾರ್ಕಳ, ಕರ್ನಾಟಕ

ಜೂನ್ 1, 201ರಂದು ಕಾರ್ಕಳ ಕೇಂದ್ರದಲ್ಲಿ ನೆರವೇರಿಸಲಾದ ಪೂರ್ಣದಿನದ ಕಾರ್ಯಕ್ರಮದಲ್ಲಿ 12 ಅಭ್ಯಾಸಿಗಳು ಉಪಸ್ಥಿತರಿದ್ದರು. ಗುರುಗಳ ಭಾಷಣದ ವಿಡಿಯೋ ಪ್ರಸ್ತುತಿಯ ನಂತರ ಸೋ. ನಳಿನಿಯವರು "ಸಾಧನೆಯಲ್ಲಿ ಮನೋಭಾವನೆಯ ಪಾತ್ರ" ಎಂಬ ವಿಷಯದ ಬಗೆಗಿನ ಕಾರ್ಯಕ್ರಮದ ಪರಿಚಯ ಮಾಡಿಸಿದರು. ಅವರು, ಸರಿಯಾದ ಮನೋಭಾವವನ್ನು ಹೊಂದಿರುವುದರ ಆವಶ್ಯಕತೆ ಹಾಗು ನಿಯಮಿತವಾಗಿ ಹತ್ತು ನಿಯಮಗಳ ಸಾಧನೆಯು ಸರಿಯಾದ



ಮನೋಭಾವವನ್ನು ಬೆಳೆಸಿಕೊಳ್ಳಲು ಸಹಾಯಕವಾಗುವುದೆಂದು ಹೇಳಿದರು. ಸಹಭಾಗಿಗಳಿಗೆ, ಅವರ ಜೀವನದ ಗುರಿ, ದೈನಿಕ ಸಾಧನೆಯ ಮೇಲಿನ ಕೆಲ ಪ್ರಶ್ನೆಗಳ ಆಧಾರದ ಮೇಲೆ ತಮ್ಮನ್ನು ತಾವೇ ಮೌಲ್ಯಮಾಪನ ಮಾಡಿಕೊಳ್ಳಲು ಕೇಳಲಾಯಿತು. ಧನಾತ್ಮಕ ಮನೋಭಾವವನ್ನಿಟ್ಟುಕೊಳ್ಳುವುದರ ಆವಶ್ಯಕತೆ, ಹಾಗು ನಮ್ಮ ಪ್ರಗತಿಯಲ್ಲಿ ಬಾಧಕವಾಗುವಂತಹ ಕೆಲ ಅಂಶಗಳ ಬಗೆಗೂ ಮಾತನಾಡಿದರು. ಈ ಪ್ರಸ್ತುತಿಯು ಗುರುಗಳ ಭಾಷಣಗಳ ಅನೇಕ ತುಣುಕುಗಳನ್ನೊಳಗೊಂಡಿತ್ತು. ಭೋಜನದ ನಂತರ ಗುಂಪು ಚರ್ಚೆ ಹಾಗು ಮನೋಭಾವದ ಮೇಲೆ ಕಥೆಗಳಾದುವು. ಕಾರ್ಯಕ್ರಮದ ಕೊನೆಗೆ ಅಭ್ಯಾಸಿಗಳನ್ನು ಎರಡು ಭಾಗಗಳನ್ನಾಗಿ ವಿಭಾಗಿಸಿ, ಈ ಮೊದಲು ಹೇಳಿದ ಕಥೆಗಳ ಆಧಾರದ ಮೇಲೆ ಕಿರು ನಾಟಕವನ್ನಾಡಲು ಹೇಳಲಾಯಿತು. ಸಾಯಂಕಾಲದ ಸತ್ಸಂಗದ ನಂತರ ಕಾರ್ಯಕ್ರಮದ ಸಮಾರೋಪವಾಯಿತು.

## ಶೋಲಾವಂದನ ಆಶ್ರಮ, ತಮಿಳುನಾಡು.



ಮೇ 25ರಂದು, ಶೋಲಾವಂದನ ಆಶ್ರಮದಲ್ಲಿ, ಮಧುರೈ, ವಾಡಿಪಟ್ಟಿ, ಉಸಿಲಂಪಟ್ಟಿ, ಚಿನ್ನಲಪಟ್ಟಿ ಮತ್ತು ಬಟ್ಲಗುಂಡು ಕೇಂದ್ರಗಳಿಂದ 150 ಅಭ್ಯಾಸಿಗಳು, "ಸಹಜ ಮಾರ್ಗ ಮತ್ತು ಕೌಟುಂಬಿಕ ಜೀವನ" ಎಂಬ ವಿಷಯದ ಮೇಲಿನ ಒಂದು ದಿನದ ಕಾರ್ಯಕ್ರಮಕ್ಕಾಗಿ ಸೇರಿದ್ದರು. ಚೆನ್ನೈಯಿಂದ ಸೋ. ಕಸ್ತೂರಿ ವೆಂಕಟರಾಮನ್, ಮಧುರೈಯಿಂದ ಸೋ. ಪಳನಿಯಪ್ಪನ್, ಚಿನ್ನಲಪಟ್ಟಿಯಿಂದ ಸೋ. ಸಾವಿತ್ರಿಯವರು ಈ ಕಾರ್ಯಕ್ರಮದ ಆಮಂತ್ರಿತ ಅಧ್ಯಾಪಕರಾಗಿದ್ದರು.

ಸೋ. ಕಸ್ತೂರಿಯವರು, ಗುರು ಮತ್ತು ಶಿಷ್ಯರ ಸಂಬಂಧ ಹಿಂದಿನ ಎಷ್ಟೋ ಜನ್ಮಗಳಿಂದ ಮುಂದುವರಿದಿರುತ್ತದೆ ಎಂಬುದನ್ನು ತಿಳಿಯಪಡಿಸುವ ಭಾಷಣದೊಂದಿಗೆ ಕಾರ್ಯಕ್ರಮವು ಪ್ರಾರಂಭವಾಯಿತು. ಸೋ. ಪಳನಿಯಪ್ಪನ್‌ರವರು ಐದು ಮತ್ತು ಏಳನೆಯ ನಿಯಮಗಳನ್ನು ಬಹಳ ಚೆನ್ನಾಗಿ ವಿವರಿಸಿ, ಸಂಕಟಗಳು ದೇವರಿಂದ ಬಂದ ಅನುಗ್ರಹ ಎಂಬ ಸಂದೇಶವನ್ನು ಅಭ್ಯಾಸಿಗಳಿಗೆ ಬಹು ಸುಂದರವಾಗಿ ತಿಳಿಸಿದರು. ಸೋ. ಸಾವಿತ್ರಿಯವರು ತಮ್ಮ ಭಾಷಣದಲ್ಲಿ ಒಬ್ಬ ಅಭ್ಯಾಸಿಗೆ ಕೌಟುಂಬಿಕ ಜೀವನದ ಮಹತ್ವವನ್ನು ಒತ್ತಿ ಹೇಳಿದರು. ಭೋಜನದ ನಂತರ, ಸಹಜ ಮಾರ್ಗ ಸಾಧನೆ ಪ್ರಾರಂಭಿಸಿದ ನಂತರ ತಮ್ಮಲ್ಲಾದ ಬದಲಾವಣೆಯ ಬಗ್ಗೆ ಗುಂಪು ಚರ್ಚೆ ಆಯಿತು. ಸೋ. ಕಸ್ತೂರಿಯವರು ಒಂದು ಪುಟ್ಟ ಭಾಷಣದೊಂದಿಗೆ ಚರ್ಚೆಯನ್ನು ಮುಕ್ತಾಯಗೊಳಿಸಿದರು. ಸಾಯಂಕಾಲದ ಸತ್ಸಂಗದ ನಂತರ ಕಾರ್ಯಕ್ರಮ ಮುಗಿಯಿತು.

## ಗ್ಯಾಂಗ್ಟಾಕ್ ಆಶ್ರಮ, ಸಿಕ್ಕಿಮ್

## ಪ್ರಭಾ ಕೇಂದ್ರ




ಗ್ಯಾಂಗ್ಟಾಕ್ ಪೂರ್ವ ಹಿಮಾಲಯದ ಪ್ರಚಂಡ ಕಾಂಚನಜಂಗಾ ಪರ್ವತದ ಮಡಿಲಲ್ಲಿ ಸ್ಥಿತವಾಗಿರುವ ಪುಟ್ಟ ಪರ್ವತ ಪ್ರದೇಶ ರಾಜ್ಯವಾದ ಸಿಕ್ಕಿಮ್‌ನ ರಾಜಧಾನಿಯಾಗಿದೆ. ಸಿಕ್ಕಿಮ್ ರಾಜ್ಯವು ಮೂರು ಅಂತರರಾಷ್ಟ್ರೀಯ ಸೀಮೆಗಳಿಂದ ಸುತ್ತುವರಿಯಲ್ಪಟ್ಟಿದೆ. ಪಶ್ಚಿಮಕ್ಕೆ ನೇಪಾಳ, ಉತ್ತರಕ್ಕೆ ಟಿಬೇಟ ಹಾಗು ಪೂರ್ವದಿಶೆಯಲ್ಲಿ ಭೂತಾನ ದೇಶಗಳಿವೆ. ಈ ಭೂಭಾಗವು ರಭಸವಾಗಿ ಹರಿಯುವ ಹೊಳೆಗಳು, ಎತ್ತರದಲ್ಲಿಯ ಸರೋವರಗಳು, ಹಿಮನದಿಗಳು ಹಾಗು ಅರಣ್ಯಗಳನ್ನೊಳಗೊಂಡ ವೈವಿಧ್ಯಪೂರ್ಣ ನಿಸರ್ಗದ ಕೊಡುಗೆಯಾಗಿದೆ.


ಗ್ಯಾಂಗ್ಟಾಕ್ ಕೇಂದ್ರವು ನವೆಂಬರ್ 2005ರಲ್ಲಿ ಪ್ರಾರಂಭವಾಗಿ, ರವಿವಾರದ ಸತ್ಸಂಗಗಳು ಒಬ್ಬ ಅಭ್ಯಾಸಿಯ ಮನೆಯಲ್ಲಿ ನಡೆಸಲಾಗುತ್ತಿತ್ತು. ಪೂಜ್ಯ ಗುರುಗಳ ನವೆಂಬರ 2009 ರಲ್ಲಿಯ ಭೇಟಿಯಿಂದ ಸಿಕ್ಕಿಮ್ ರಾಜ್ಯವು ಉಪಕೃತವಾಯಿತು. ಅವರು ಗಾಂಗಟೋಕನಲ್ಲಿ ಆನಂದಯುತವಾದ ಮೂರುದಿನಗಳ ಕಾಲ ತಂಗಿದ್ದು, ಅತ್ಯಂತ ಸಂತುಷ್ಟರಾಗಿದ್ದರು. ಈ ಭೇಟಿಯ ಸಂದರ್ಭದಲ್ಲಿ, ಒಂದು ಆಶ್ರಮವನ್ನು ಪಡೆದುಕೊಳ್ಳಬೇಕೆಂಬ ವಿಚಾರ ಬೇರೂರಿತು.

2011 ನೇ ಸಾಲಿನಲ್ಲಿ ಸಿಕ್ಕಿಮ್ ಶಾಸನವು ಮಿಷನ್ನಿಗಾಗಿ 0.33 ಎಕರೆ ಭೂಭಾಗವನ್ನು ನಿಗದಿಪಡಿಸಲು ನಿರ್ಧರಿಸಿತು. ಈ ಭೂಭಾಗವು ಗಾಂಗಟೋಕ ನಗರದ ಮಧ್ಯಭಾಗದಲ್ಲಿದೆ. ಗುರುಗಳು ಈ ಸ್ಥಳದಲ್ಲಿ ಆಶ್ರಮ ಕಟ್ಟಲು ಅನುಮತಿಯನ್ನಿತ್ತರು. 12ನೇ ಸಪ್ಟೆಂಬರ್ 2011 ರಂದು ಸಂಪರ್ಕ ಮಾರ್ಗ ಹಾಗು ಸುತ್ತು ಗೋಡೆಗಳನ್ನು ಕಟ್ಟುವ ಕೆಲಸ ಪ್ರಾರಂಭಿಸಲಾಯಿತು. ನಿಸರ್ಗವು ಮಾನವನ ಸಂಕಲ್ಪ ಮತ್ತು ವಿಶ್ವಾಸಗಳನ್ನು ಪರೀಕ್ಷಿಸುತ್ತದೆ. ಈ ಕಟ್ಟಡದ ಕೆಲಸ ಆರಂಭವಾದ ಆರು ದಿನಗಳ ನಂತರ, ಸೆಪ್ಟೆಂಬರ್ 18ರಂದು ವಿನಾಶಕಾರಿ ಭೂಕಂಪವು ಸಿಕ್ಕಿಮನ್ನು ಸದೆಬಡಿದಾಗ ನಿಜವಾಗಿಯೂ ಇದರ ಪರೀಕ್ಷೆಯಾದಂತಾಯಿತು. ಇದು ಆಶ್ರಮವು ಭೂಕಂಪ ನಿರೋಧಕ ಕಟ್ಟಡವಾಗುವಂತೆ ಮಾಡುವುದಕ್ಕಾಗಿ, ಮೊದಲಿನ ರಚನೆಯ ಪರಿಮಾಣಗಳನ್ನು ಬದಲಾಯಿಸುವಂತೆ ಮಾಡಿತು. ಮತ್ತೆ ಈ ಕೆಲಸವು ಮಾರ್ಚ್ 2012ರಲ್ಲಿ ಮುಂದುವರಿಸಲಾಯಿತು. ಇಳುಕಲು ಭೂಪ್ರದೇಶ, ಭಾರೀ ಮಳೆಗಳಂತಹ ಸವಾಲುಗಳನ್ನೆಲ್ಲಾ ಗುರುಗಳ ಕೃಪೆಯಿಂದ ಪರಿಹರಿಸಿಕೊಳ್ಳಲು ಸಾಧ್ಯವಾಯಿತು. ಕಟ್ಟಡದ ಹೊರನೋಟವನ್ನು ಸುತ್ತಮುತ್ತಲಿನ ಪರಿಸರಕ್ಕೆ ಹೊಂದಿಕೊಳ್ಳುವಂತೆ, ಗುರುಗಳ ನಿರ್ದೇಶನ ಮೇರೆಗೆ ರಚಿಸಲಾಯಿತು. ಆಶ್ರಮವನ್ನು ಒಂದು ಸಣ್ಣ ಭೂಭಾಗದಲ್ಲಿ ಕಟ್ಟಲಾಗಿದೆಯಾದರೂ ಎಲ್ಲಾ ಸೌಕರ್ಯಗಳನ್ನೊಳಗೊಂಡಿದೆ. 200 ಅಭ್ಯಾಸಿಗಳ ಆಸೀನರಾಗುವಷ್ಟು ಸ್ಥಳಾವಕಾಶವಿರುವ ಧ್ಯಾನ ಮಂದಿರ, ಅಧ್ಯಕ್ಷರ ಕಾರ್ಯಾಲಯ, ಭೋಜನ ಗೃಹ, ಉಗ್ರಾಣವನ್ನೊಳಗೊಂಡ ಅಡುಗೆಮನೆ ,ಆಶ್ರಮ ವ್ಯವಸ್ಥಾಪಕರ ನಿವಾಸ, ಮಕ್ಕಳ ಕೇಂದ್ರ, ಸ್ವಚ್ಛತಾಗೃಹ ಮತ್ತು ಒಂದೇ ಬಾರಿಗೆ ಇಪ್ಪತ್ತು ಅಭ್ಯಾಸಿಗಳು ತಂಗುವಂತಹ ಕೊಠಡಿಗಳಿವೆ.

ಆಶ್ರಮದ ಎರಡೂ ಕಡೆಗೂ ನಿಚ್ಚಳ ನೀರಿನ ಝರಿಗಳು ಮತ್ತು ವಾಯುವ್ಯ ದಿಶೆಯಲ್ಲಿ ಸುಂದರವಾದ ಕಣಿವೆಯ ದೃಶ್ಯಗಳು ಈ ಸ್ಥಳದ ವೈಶಿಷ್ಟ್ಯವಾಗಿದೆ.

ಆಶ್ರಮವನ್ನು ಗುರುಪೂರ್ಣಿಮೆಯ ದಿನ, 22 ನೇ ಜುಲೈ 2013ರಂದು ಚೆನ್ನೈಯಲ್ಲಿ ಪೂಜ್ಯ ಗುರುಗಳಿಂದ ಉದ್ಘಾಟಿಸಲಾಯಿತು. ಗ್ಯಾಂಗ್ಟಾಕ್‌ನ ಅಭ್ಯಾಸಿಗಳು ಈ ಆಶ್ರಮದ ಡಿವಿಡಿಯೊಂದಿಗೆ ಹೋಗಿದ್ದರು. ಉದ್ಘಾಟನೆಯ ನಂತರ ಅವರು "...ಕಮಲೇಶ, ಬಾಬೂಜೀಯವರು ಅನುಮತಿಯನ್ನಿತ್ತರೆ ನಾನು ಈ ಸ್ಥಳಕ್ಕೆ ಭೇಟಿಕೊಡಬಯಸುವೆ" ಎಂದರು.







To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org

© 2014 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.